بِسْمِ اللهِ الرَّحْمٰنِ الرَّحِيْم     نَحْمَدُهٗ وَنُصَلِّى عَلٰى رَسُوْلِهِ الْكَرِيْم     وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ


ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 30

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

06 ಆಗಸ್ಟ್ 2020, 06 ತಬ್‌ಲೀಗ್ 1399 ಹಿಜರಿ ಶಮ್‌ಸಿ,
15 ಝುಲ್-ಹಜ್ಜ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ.

## ಅಲ್ಲಾಹನ ಉಪದೇಶ

يَاَيُّهَا الَّذِيْنَ اٰمَنُوْا لَا تَاْكُلُوْٓا اَمْوَالَكُمْ
بَيْنَكُمْ بِالْبَاطِلِ اِلَّآ اَنْ تَكُوْنَ تِجَارَةً عَنْ
تَرَاضٍ مِّنْكُمْ وَلَا تَقْتُلُوْٓا اَنْفُسَكُمْ اِنَّ
اللّٰهَ كَانَ بِكُمْ رَحِيْمًا○ (النساء:30)

*(ಅನ್ನಿಸಾಅ್:30)*

ಅಂದರೆ: ಎಲೈ ವಿಶ್ವಾಸಿಗಳೇ, ನಿಮ್ಮ ಧನವನ್ನು ಪರಸ್ಪರ ಅನ್ಯಾಯವಾಗಿ ತಿನ್ನಬೇಡಿರಿ. ಆದರೆ ನೀವು ಉಭಯ ಸಮ್ಮತದಿಂದ ವ್ಯಾಪಾರ ಮೂಲಕ ಧನ ಸಂಪಾದನೆ ಮಾಡಬಹುದು.ನಿಮ್ಮನ್ನೇ ನೀವು ಕೊಲ್ಲಬೇಡಿರಿ.ನಿಸ್ಸಂದೇಹವಾಗಿಯೂ ಅಲ್ಲಾಹನು ನಿಮ್ಮ ಮೇಲೆ ಅತಿ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ.

**ಅಲ್ಲಾಹನು ನಿಮ್ಮ ಜನ್ಮದ ನಿಜವಾದ ಉದ್ದೇಶ ವಿವರಿಸಿದ್ದೇನೆಂದರೆ, ಅಲ್ಲಾಹನ ಆರಾಧನೆ ಮಾಡುವುದಾಗಿದೆ. ಆದರೆ ಯಾರು ತಮ್ಮ ಈ ನಿಜವಾದ ಮತ್ತು ಸಹಜವಾದ ಉದ್ದೇಶವನ್ನು ಬಿಟ್ಟು ದನಗಳ ಹಾಗೆ ಜೀವನ ಕಳೆಯುತ್ತಾರೆ. ಅವರ ಜೀವನದ ಉದ್ದೇಶ ಕೇವಲ ಉಣ್ಣುವುದು, ಕುಡಿಯುವುದು ಮತ್ತು ಮಲಗುವುದು ಅಷ್ಟೆ ಆಗಿರುತ್ತದೆ. ಅವು ಅಲ್ಲಾಹನ ಅನುಗ್ರಹದಿಂದ ದೂರೆಯುತ್ತದೆ. ಮತ್ತು ಅಲ್ಲಾಹನು ಅವರ ಜವಾಬ್ದಾರಿ ವಹಿಸುವುದಿಲ್ಲ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಮಾನವ ಜನ್ಮದ ನಿಜವಾದ ಉದ್ದೇಶ:**

ಅಲ್-ಅಸರ್ ಅಧ್ಯಾಯದಲ್ಲಿ ಅಲ್ಲಾಹನು ಅವಿಶ್ವಾಸಿಗಳ ಮತ್ತು ಸತ್ಯವಿಶ್ವಾಸಿಗಳ ಜೀವನ ಮಾದರಿಯನ್ನು ಉಲ್ಲೇಖಿಸಿದ್ದಾನೆ. ಅವಿಶ್ವಾಸಿಗಳ ಜೀವನವು ಪಶುಗಳ ಸಮಾನವಾಗಿರುತ್ತದೆ ಅವರಿಗೆ ತಿನ್ನುವುದು, ಕುಡಿಯುವುದು ಹಾಗೂ ಕಾಮಭಾವನೆಗಳ ಹೊರತು ಇನ್ನೇನು ಕೆಲಸವಿರುವುದಿಲ್ಲ. **"ತಕುಲೂನ ಕಮಾ ತಕುಲುಲ್ ಅನ್‌ಆಮ್"** (ಮುಹಮ್ಮದ್: 13) ಅಂದರೆ ನೋಡಿ! ಒಂದು ಎತ್ತು ಮೇವು ಮೇಯುವುದು, ಆದರೆ ಹೊಲ ಉಳುವ ಸಮಯದಲ್ಲಿ ಕುಳಿತುಕೊಂಡು ಬಿಟ್ಟರೆ ಪರಿಣಾಮ ಏನಾಗುವುದು? ಅದನ್ನು ಖಸಾಯಿ ಖಾನೆಗೆ ಹೋಗಿ ಮಾರಾಟ ಮಾಡಿ ಬರುವುದು ಅಷ್ಟೆ ಅಲ್ಲವೆ, ಅದೇ ರೀತಿ ಇಂತಹ ಜನರೊಡನೆ (ಯಾರು ಅಲ್ಲಾಹನ ಆಜ್ಞೆಗಳನ್ನು ಪಾಲಿಸದೆ ಅಥವಾ ಅವಗಣನೆ ಮಾಡಿ ತನ್ನದೆ ಆದ ಧರ್ಮರಹಿತ ಜೀವನ ಕಳೆಯುತ್ತಾರೆ) ಹೇಳುತ್ತಾನೆ: **ಖುಲ್ ಮಾ ಯಾಬವು ಬಿಕುಂ ರಬ್ಬಿ ಲೌಲಾ ದುಆಉಕುಮ್"** (ಅಲ್ ಫುರ್‌ಖಾನ್: 78) ಅಂದರೆ: ನಿಮ್ಮ ಪ್ರಾರ್ಥನೆ ಇಲ್ಲದಿದ್ದರೆ ನನ್ನ ಪ್ರಭು ನಿಮ್ಮನ್ನು ಏನು ಗಮನಸಲಿಕ್ಕೆ? ನೀವಾದರೂ ಅದನ್ನು ಧಿಕ್ಕರಿಸಿರಿ. ಈ ಮಾತನ್ನು ಮಾನವ ಧರ್ಮವಾಗಿ ನೆನಪಿಡಿರಿ ಅಲ್ಲಾಹನ ಆರಾಧನೆಗೋಸ್ಕರ ಪ್ರೀತಿಯು ಅವಶ್ಯಕವಾಗಿದೆ. ಪ್ರೀತಿ ಎರಡು ವಿಧಗಳದ್ದಾಗಿರುತ್ತದೆ. ಒಂದು ನೈಜವಾದ ಪ್ರೀತಿ ಇನ್ನೊಂದು ಸ್ವಾರ್ಥವನ್ನು ಅವಲಂಬಿಸಿರುತ್ತದೆ. ಅಂದರೆ ಕೆಲವು ಸ್ವಹಿತದ ಕಾರಣಗಳಿರುತ್ತದೆ. ಆದರೆ ನಿಜವಾದ ಪ್ರೀತಿ ಯಥಾರ್ಥ ಪ್ರೀತಿ ಉಲ್ಲಾಸ ಉಂಟುಮಾಡುತ್ತದೆ. ಮಾನವ ಸಹಜವಾಗಿ ಅಲ್ಲಾಹನಿಗೋಸ್ಕರ (ತನ್ನ ಸೃಷ್ಟಿಕರ್ತನಿಗೋಸ್ಕರ) ಜನ್ಮ ಪಡೆದಿರುತ್ತಾನೆ. ಆ ಮಾತು ಅಲ್ಲಾಹನು ಹೇಳಿದನು: **"ವಮಾ ಖಲಖ್ತುಲ್ ಜಿನ್ನ ವಲ್ ಇನ್ಸ ಇಲ್ಲ ಲಿಯಬುದೂನ್"** (ಅಝ್ಝಾರಿಯಾತ್: 57) ಆದುದರಿಂದ ಅಲ್ಲಾಹನು ಅವನ ಹುಟ್ಟು ಗುಣಗಳಲ್ಲಿಯೇ ಆ ಅಂಶ ಇಟ್ಟಿರುತ್ತಾನೆ. ರಹಸ್ಯವನ್ನು, ರಹಸ್ಯ ಮಾರ್ಗಗಳನ್ನು ಅವನಿಗಾಗಿ ಸೃಷ್ಟಿಸಿದ್ದಾನೆ. ಆದರಿಂದ ತಿಳಿದು ಬರುವುದೇನೆಂದರೆ ಅಲ್ಲಾಹನು ನಿಮ್ಮ ಜನ್ಮದ ನಿಜವಾದ ಉದ್ದೇಶ ವಿಧಿಸಿದ್ದೇನೆಂದರೆ ಅಲ್ಲಾಹನ ಆರಾಧನೆ ಮಾಡುವುದಾಗಿದೆ. ಆದರೆ ಯಾರು ತಮ್ಮ ಈ ನಿಜವಾದ ಮತ್ತು ಸಹಜವಾದ ಉದ್ದೇಶವನ್ನು ಬಿಟ್ಟು ದನಗಳ ಹಾಗೆ ಜೀವನ ಕಳೆಯುತ್ತಾರೆ. ಅವರ ಜೀವನದ ಉದ್ದೇಶ ಕೇವಲ ಉಣ್ಣುವುದು, ಕುಡಿಯುವುದು ಮತ್ತು ಮಲಗುವುದು ಅಷ್ಟೆ ಆಗಿರುತ್ತದೆ. ಅವರು ಅಲ್ಲಾಹನ ಅನುಗ್ರಹಗಳಿಂದ ದೂರವಿರುತ್ತಾರೆ ಮತ್ತು ಅಲ್ಲಾಹನು ಅವರ ಜವಾಬ್ದಾರಿ ವಹಿಸುವುದಿಲ್ಲ. ಜವಾಬ್ದಾರಿಯುತ ಜೀವನ ಅಂದರೆ ಅದೇ ಆಗಿದೆ. **"ಮಾ ಖಲಖ್ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿಯಾಬುದೂನ್"** ಮೇಲೆ ವಿಶ್ವಾಸವಹಸಿ ಜೀವನದ ಶೈಲಿ ಪರಿವರ್ತಿಸಿಕೊಳ್ಳಬೇಕು. ಸಾವಿನ ಭರವಸೆ ಇಲ್ಲ.

ಆಯುಷ್ಯ ಶಾಶ್ವತವಲ್ಲ. ಅದನ್ನು ನಂಬಿಕೊಂಡಿರುವುದು ಬುದ್ಧಿವಂತನ ಕೆಲಸವಲ್ಲ. ಮೃತ್ಯ ಆಕ್ರಮಣ ರೀತಿಯಲ್ಲಿ ಬಂದುಬಿಡುತ್ತದೆ ಗೋಚರಿಸುವುದೇ ಇಲ್ಲ. ಅದಾಗ್ಯೂ ಮಾನವನು ಮೃತ್ಯುವಿನ ಹಿಡಿತದಲ್ಲಿ ಸೆರೆಯಾಗಿದ್ದಾರೆ. ಹೀಗಿರುವಾಗ ಅಲ್ಲಾಹನ ಹೊರತು ಅವನ ಜೀವನದ ಜವಾಬ್ದಾರಿ ಯಾರಾಗಲು ಸಾಧ್ಯ.

**ಅಲ್ಲಾಹನಿಗಾಗಿ ಜೀವನ**

ಜೀವನವು ಅಲ್ಲಾಹನಾಗಿದ್ದರೆ ಅಲ್ಲಾಹನು ಅವನನ್ನು ಸಂರಕ್ಷಿಸುವನು. ಬುಖಾರಿಯ ಒಂದು ಹದೀಸಿನಲ್ಲಿ ಹೀಗಿದೆ: ಯಾರು ಅಲ್ಲಾಹನ ಪ್ರೀತಿಗೆ ಸಂಬಂಧಿಸಿರುತ್ತಾನೆ, ಅಲ್ಲಾಹನು ಅವನ ಅಂಗಂಗಳಾಗಿ ಬಿಡುತ್ತಾನೆ. ಇನ್ನೊಂದು ವರದಿ ಹೀಗಿದೆ. ಅವನೊಂದಿಗೆ ಎಷ್ಟರ ಮಟ್ಟಿಗೆ ಮೈತ್ರಿಯಾಗುತ್ತದೆ ಅಂದರೆ ನಾನು ಅವನ ಕೈ ಕಾಲು ಇತ್ಯಾದಿ ಅಲ್ಲದೆ ನಾಲಗೆಯಾಗಿ ಬಿಡುತ್ತೇನೆ. ಅದರಿಂದ ಅವನು ಉಚ್ಚರಿಸುತ್ತಾನೆ. ವಾಸ್ತವವೇನೆಂದರೆ ಮನುಷ್ಯನು ಭಾವೋದ್ರೇಕಗಳಿಂದ ಮುಕ್ತವಾಗಿ ಅಲ್ಲಾಹನ ಆಜ್ಞೆ ಅನುಸಾರವಾಗಿ ನಡೆದುಕೊಂಡರೆ ಅವನ ಯಾವ ಕ್ರಿಯೆಯೂ ಧರ್ಮ ರಹಿತವಾಗಿರುವುದಿಲ್ಲ. ಬದಲು ಅವನ ಎಲ್ಲ ಕ್ರಿಯೆಗಳು ಅಲ್ಲಾಹನ ಅಜ್ಞಾನುಸಾರವಾಗಿ ನಡೆಯುತ್ತವೆ. ಅದಕ್ಕಿಂತ ಮಿಗಿಲಾದುವುದೇನೆಂದರೆ ಅಲ್ಲಾಹನು ಅದನ್ನು ತನ್ನ ಕ್ರಿಯೆ ಎಂದು ಪರಿಗಣಿಸುತ್ತಾನೆ. ಇದು ಅಲ್ಲಾಹನ ಸಾನಿಧ್ಯದ ಒಂದು ಸ್ಥಾನವಾಗಿದೆ. ಅಲ್ಲಿಯವರೆಗೆ ಸ್ಥಾನ ಪಡೆಯದವರು ನಷ್ಟ ಅನುಭವಿಸಿದ್ದಾರೆ ಅಥವಾ ದೈವಿಕ ಗುಣಗಳ ಹಾಗೂ ದೈವಿಕ ಸಾನಿಧ್ಯದ ಅರ್ಥ ತಿಳಿಯದವರು ತಪ್ಪು ಕಲ್ಪನೆಗಳಿಗೆ ಗುರಿಯಾಗಿದ್ದಾರೆ. ಮತ್ತು ಸಕಾರ ದೇವನ ಸಮಸ್ಯೆ ಹುಟ್ಟು ಹಾಕಿದ್ದಾರೆ. ಈ ವಿಷಯವನ್ನು ಮರೆಯಬಾರದು ಎಲ್ಲಿ ಆತಂಕಕ್ಕೆ ಒಳಗಾಗುವನೋ ಆ ಕೆಲಸ ದೈವೇಚ್ಚೆಗೆ ಪಾತ್ರರಾಗಿರುವುದಿಲ್ಲ. ಅದು ಅಲ್ಲಾಹನ ಇಚ್ಚೆಗೆ ವಿರುದ್ಧವಾಗಿರುತ್ತದೆ. ಇಂತಹ ವ್ಯಕ್ತಿ ತನ್ನ ಭಾವೋದ್ರೇಕಗಳಡಿ ಇರುತ್ತಾನೆ ಹೊರತು ದೈವಿಕ ನಿಯಮದಡಿ ಇರುವುದಿಲ್ಲ. ಆದರೆ ಅಲ್ಲಾಹನ ವಲಿ (ಸಂತ) ಆದವನು ಅಲ್ಲಾಹನ ಸಂರಕ್ಷಣೆಯಲ್ಲಿರುತ್ತಾನೆ. ಅವನ ಯಾವ ಕ್ರಿಯೆಯು ದೇವ ಗ್ರಂಥಕ್ಕೆ ವಿರುದ್ಧವಾಗಿರುವುದಿಲ್ಲ. ಅವನು ಎಲ್ಲ ಮಾತುಗಳನ್ನು ಮತ್ತು ಇಷ್ಟಾರ್ಥಗಳನ್ನು ದೇವ ಗ್ರಂಥಿಕ್ಕೆ ಒಳಪಡಿಸುತ್ತಾನೆ. ಅದರಿಂದ ಮಾರ್ಗದರ್ಶನ ಪಡೆಯುತ್ತಾನೆ.

ಮತ್ತೆ ಮುಂದೆ ಹೇಳಲಾಗಿದೆ. ಅವನ ಜೀವ ತೆಗೆಯಲು ಅಲ್ಲಾಹನು ಸಂಕೋಚಪಡುತ್ತಾನೆ. ಅಲ್ಲಾಹನು ಸಂಕೋಚ ಪಡುವುದರಿಂದ ಮುಕ್ತನಾದರೆ (ತಾತ್ಪರ್ಯವೇನೆಂದರೆ ಒಂದ ಅರ್ಥಗರ್ಭಿತ ರೀತಿಯಲ್ಲಿ ಅವನಿಗೆ ಮರಣ ನೀಡಲಾಗುತ್ತದೆ.) ಒಂದು ಮಹೋನ್ನತ ಉದ್ದೇಶಕ್ಕಾಗಿ ಅವನನ್ನು ಪರಲೋಕಕ್ಕೆ ಕರೆತರಲಾಗುತ್ತದೆ. ಅಲ್ಲದಿದ್ದರೆ ಅವನ ಅಸ್ತಿತ್ವ ಅಲ್ಲಾಹನಿಗೆ ಪ್ರೀಯವಾಗಿರುತ್ತದೆ. ಆದುದರಿಂದ ಮನುಷ್ಯನ ಜೀವನ ಅಲ್ಲಾಹನಿಗೆ ಅವನ ಜೀವನ ಅಂತ್ಯಗೊಳಿಸಲು ಸಂಕೋಚಪಡುವ ರೀತಿಯಲ್ಲಿ ಆಗದಿದ್ದರೆ ಅದು ಅವರಿಗಿಂತ ದುಸ್ಥಿರವಾಗಿರುತ್ತದೆ. ಒಂದು ಮೇಕೆಯಿಂದ ಹಲವು ಜನರು ಬಾಳುತ್ತಾರೆ ಮತ್ತು ಅದರ ಚರ್ಮ ಸಹ ಕೆಲಸಕ್ಕೆ ಬರುತ್ತದೆ. ಮನುಷ್ಯನಾದವನು ಯಾವ ಕೆಲಸಕ್ಕೂ ಬಾರದಿದ್ದರೆ

*(ಪುಟ ಸಂಖೆ 06 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಯಾ ರಸೂಲಲ್ಲಾಹ್!! ನಾನು ನಿಮ್ಮ ಮುಂದೆಯು ಯುದ್ಧವಾಡುವೆವು, ನಿಮ್ಮ ಹಿಂದೆಯು ಯುದ್ಧವಾಡುವೆವು, ನಿಮ್ಮ ಬಲಭಾಗದಲ್ಲಿಯು ಯುದ್ಧವಾಡುವೆವು ಮತ್ತು ಎಡಭಾಗದಲ್ಲಿಯು ಯುದ್ಧವಾಡುವೆವು ಮತ್ತು ವೈರಿಗಳು ನಮ್ಮ ಮೃತದೇಹಗಳನ್ನು ನಾಶಪಡಿಸಿದ ನಂತರವೇ ನಿಮ್ಮ ಬಳಿಗೆ ತಲುಪಲು ಸಾಧ್ಯವಾಗುವುದು.”**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಸಅದ್ ಬಿನ್ ಮುಆಝ್^(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಓ ಅಲ್ಲಾಹ್, ಅನ್‌ಸಾರ್‌ಗಳ ಮೇಲೆ ದಯೆದೋರು ಅನ್‌ಸಾರ್‌ಗಳ ಮಕ್ಕಳ ಮೇಲೆಯೂ ದಯೆದೋರು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **03–07–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.
اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಕಳೆದ ಖುತ್‌ಬಗಳಲ್ಲಿ ಹಝ್ರತ್ ಸಅದ್ ಬಿನ್ ಮುಆಝ್^(ರ) ರವರ ಬಗ್ಗೆ ಪ್ರಸ್ತಾಪಿಸುತ್ತಿದ್ದೆನು. ಬದರ್ ಯುದ್ಧದಲ್ಲಿ ಒಂದು ಘಟನೆಯನ್ನು ಕಳೆದ ವಾರದ ಖುತ್‌ಬದಲ್ಲಿ ವಿವರಿಸಿದ್ದೆ ಆ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್^(ರ) ರವರು ಸಹ ಅದನ್ನು ವಿವರಿಸಿದ್ದಾರೆ. ಅವರು ಹೀಗೆ ಹೇಳುತ್ತಾರೆ: “ಸಹಜವಾದ ವಿಷಯವೇನಂದರೆ ಎಲ್ಲಿ ಪ್ರೀತಿ ಇರುತ್ತದೆಯೋ ಅಲ್ಲಿ ಯಾರು ಸಹ ನನ್ನ ಪ್ರೀಯತಮೆಯನ್ನು ತೊಂದರೆ ಉಂಟಾಗಲಿ ಮತ್ತು ತನ್ನ ಪ್ರೀಯತಮೆಯು ಯುದ್ಧದಲ್ಲಿ ಭಾಗವಹಿಸಲಿ ಎಂದು ಬಯಸುವುದಿಲ್ಲ. ಬದಲಿಗೆ ತನ್ನ ಪ್ರೀಯತಮೆಯು ಆ ಯುದ್ಧದಿಂದ ಪಾರಾಗಲಿ ಎಂದು ಪ್ರಯತ್ನಿಸುತ್ತಾರೆ. ಅದೇ ರೀತಿ ಸಹಾಬರವರು ಸಹ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಯುದ್ಧದಲ್ಲಿ ಭಾಗವಹಿಸಲು ಇಷ್ಟಪಡುತ್ತಿರಲಿಲ್ಲ. ಸಹಾಬರವರು ಸ್ವತಃ ಯುದ್ಧದಲ್ಲಿ ಏಕೆ ಭಾಗವಹಿಸಬೇಕು ಎಂದು ಯೋಚಿಸುತ್ತಿರಲಿಲ್ಲ ಬದಲಿಗೆ ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಯುದ್ಧದಲ್ಲಿ ಭಾಗವಹಿಸುವುದು ಇಷ್ಟಪಡುತ್ತಿರಲಿಲ್ಲ. ಇದು ಓರ್ವ ಪ್ರೇಮಿಯು ತನ್ನ ಪ್ರೀಯತಮೆಯ ಮೇಲೆ ಇರಿಸಿಕೊಂಡಂತಹ ಸಹಜವಾದ ಆಸೆಯಾಗಿತ್ತು. ಇದಲ್ಲದೇ ನಾವು ನೋಡುತ್ತೇವೆ ಇತಿಹಾಸದಿಂದ ಸಾಕ್ಷಿಗಳು ಸಹ ಲಭಿಸಿದೆ ಅಂದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಬದರ್ ಸಮೀಪ ತಲುಪಿದಾಗ ಅವರು^(ಸ) ಸಹಾಬರವರಿಗೆ ಹೇಳಿದರು: ಅಲ್ಲಾಹನು ನನಗೆ ಈ ಸಮಾಚಾರವನ್ನು ತಿಳಿಸಿರುವನು ನಾವು ಎದುರಾಗುವುದು ಓರ್ವ ಗುಂಪಿನೊಂದಿಗೆ ಅಲ್ಲ ಬದಲಿಗೆ ಒಂದು ಸೈನ್ಯದೊಂದಿಗೆ ಎಂದು. ತದನಂತರ ರಸೂಲುಲ್ಲಾಹ್^(ಸ) ರವರು ಅದರ ಬಗ್ಗೆ ಅವರೊಂದಿಗೆ ಸಲಹೆ ಕೇಳಿ ಹೀಗೆ ಹೇಳಿದರು ನಿಮ್ಮ ಸಲಹೆ ಏನಾಗಿದೆ? ಎಂದು ಅವರ ಈ ಮಾತನ್ನು ಹಿರಿಯ ಸಹಾಬರವರು ಆಲಿಸಿದಾಗ ಅವರು ಒಬ್ಬೊಬ್ಬರಾಗಿ ಎದ್ದು ಅತೀ ವಿಧೇಯಭಾವದಿಂದ ಭಾಷಣಗಳನ್ನು ಮಾಡುತ್ತಾ ಹೇಳಿದರು ನಾವು ಪ್ರತಿಯೊಂದು ಸೇವೆಗಾಗಿ ಸಿದ್ಧರಿದ್ದೇವೆ ಎಂದು. ಹೀಗೆ ಎಲ್ಲರು ತಮ್ಮ ಭಾಷಣಗಳನ್ನು, ಸಲಹೆಗಳನ್ನು ನೀಡಿ ಕುಳಿತುಕೊಳ್ಳುತ್ತಿದ್ದರು. ಹೀಗೆ ಎಲ್ಲರು ನಮ್ಮ ಅಲ್ಲಾಹನು ನಮಗೆ ಆದೇಶಿಸಿದ ನಂತರ ನಾವು ಅದಕ್ಕೆ ಸಿದ್ಧರಾಗಿದ್ದೇವೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳುತ್ತಿದ್ದರು ನನಗೆ ಇನ್ನೂ ಸಲಹೆಗಳನ್ನು ನೀಡಿರಿ. ಅದಕ್ಕೆ ಕಾರಣ ಸಲಹೆಗಳನ್ನು ನೀಡುವವರು ಕೇವಲ ಮುಹಾಜಿರೀನರಾಗಿದ್ದರು. ತದನಂತರ ರಸೂಲುಲ್ಲಾಹ್^(ಸ) ಪದೇ ಪದೇ ನನ್ನನ್ನು ಸಲಹೆಗಳನ್ನು ನೀಡಿರಿ ಎಂದು ಹೇಳುತ್ತಿದ್ದುದ್ದನ್ನು ಆಲಿಸಿ ಓಸ್ ಗೋತ್ರದ ಮುಖಂಡರಾದ ಹಝ್ರತ್ ಸಅದ್ ಬಿನ್ ಮುಆಝ್^(ರ) ರಸೂಲುಲ್ಲಾಹ್^(ಸ)ರವರ ಉದ್ದೇಶವನ್ನು ಅರಿತುಕೊಂಡರು. ಅವರು ಅನ್ಸಾರ್ ಕಡೆಯಿಂದ ಎದ್ದು ನಿಂತು ಹೇಳಿದರು ಯಾ ರಸೂಲಲ್ಲಾಹ್!! ನಿಮ್ಮ ಬಳಿ ಬಹಳಷ್ಟು ಸಲಹೆಗಳನ್ನು ನೀಡಲಾಗುತ್ತಿದೆ ಆದರೂ ತಾವು ಮತ್ತೆ ಮತ್ತೆ ಸಲಹೆಗಳನ್ನು ನೀಡಿರಿ ಎಂದು ಹೇಳುತ್ತಿದ್ದೀರಿ. ಇದರಿಂದ ಅರಿವಾಗುವುದೇನೆಂದರೆ ತಾವು ಅನ್ಸಾರ್‌ಗಳಿಂದ ಸಲಹೆ ಯಾಚಿಸುತ್ತಿದ್ದೀರಿ ಎಂದು. ಇಲ್ಲಿಯ ತನಕ ನಾವು ನಿಶಬ್ಧವಾಗಿದ್ದೇವೆ ಎಂದರೆ ಅದಕ್ಕೆ ಕಾರಣ ಏನೆಂದರೆ ಒಂದು ವೇಳೆ ನಾವು ಯುದ್ಧವಾಡಲು ಬೆಂಬಲ ನೀಡಿದರೆ ನಾವು ಮುಹಾಜಿರೀನರ ಖೌಮಿನವರ ವಿರುದ್ಧ ಮತ್ತು ಅವರ ಸಹೋದರರ ವಿರುದ್ಧ ಅವರನ್ನು ಕೊಲ್ಲಬೇಕೆಂದು ಯುದ್ಧವಾಡಲು ಯೋಚಿಸುತ್ತಿದ್ದೇವೆ ಎಂದು ಮುಹಾಜೀನರು ಭಾವಿಸಬಹುದು ಎಂದಾಗಿದೆ. ಮತ್ತೆ ಅವರು ಹೇಳಿದರು ಯಾ ರಸೂಲಲ್ಲಾಹ್!! ಬೈಅತೆ ಅಖಬದ ಆ ಒಪ್ಪಂದದ ಬಗ್ಗೆಯು ಯೋಚನೆ ಇರಬಹುದು. ಅದರಲ್ಲಿ ನಮ್ಮ ಕಡೆಯಿಂದ ಈ ಶರತ್ತು ಇರಿಸಲಾಗಿತ್ತು. ಅಂದರೆ ವೈರಿ ಮದೀನದ ಮೇಲೆ ಹಲ್ಲೆ ಮಾಡಿದರೆ ನಾವು ಅವರ ವಿರುದ್ಧ ಹೋರಾಡುವೆವು. ಆದರೆ ಮದೀನದ ಹೊರಗೆ ಹೋಗಿ ಯುದ್ಧವಾಡಬೇಕಾದರೆ ನಾವು ಅದಕ್ಕೆ ಹೊಣೆ ಆಗುವುದಿಲ್ಲ. ಇದಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಹೌದು. ಸಅದ್ ಬಿನ್ ಮುಆಝ್^(ರ) ಹೇಳಿದರು ಯಾ ರಸೂಲಲ್ಲಾಹ್!! ನಾವು ನಿಮ್ಮನ್ನು ಮದೀನಕ್ಕೆ ಕರೆಸಿದಾಗ ನಮಗೆ ಅಂದು ನಿಮ್ಮ ಶ್ರೇಷ್ಠತೆ ಹಾಗೂ ಉನ್ನತ ಸ್ಥಾನದ ಬಗ್ಗೆ ಅರಿವಿರಲಿಲ್ಲ. ಈಗ ನಾವು ನಿಮ್ಮ ಶ್ರೇಷ್ಠತೆಯನ್ನು ನಮ್ಮ ಕಣ್ಣಾರೆ ನೋಡಿದ್ದೇವೆ. ಈಗ ಈ ಒಪ್ಪಂದವು ನಮ್ಮ ಎದುರು ಯಾವ ಶ್ರೇಷ್ಠತೆಯು ಹೊಂದಿಲ್ಲ. ನಾವು ನೋಡಿದ್ದೇವೆ ಮತ್ತು ನಮ್ಮ ಆಧ್ಯಾತ್ಮಿಕ ಕಣ್ಣುಗಳು ತೆರೆದಿವೆ ಆದ್ದರಿಂದ ಆ ಒಪ್ಪಂದದ ಯಾವ ಸತ್ಯತೆಯು ನಮಗೆ ಇಲ್ಲ. “ಆದ್ದರಿಂದ ನೀವು ಎಲ್ಲಿ ಬೇಕಾದರು ನಡೆಯಿರಿ ನಾವು ನಿಮ್ಮೊಂದಿಗೆ ಇರುವೆವು. ಅಲ್ಲಾಹನ ಆಣೆ!! ನೀವು ನಮ್ಮನ್ನು ಸಮುದ್ರದಲ್ಲಿ ಹಾರಲು ಆದೇಶಿಸಿದರೆ ನಾವು ಅದರಲ್ಲಿ ಹಾರುವೆವು ನಮ್ಮಲ್ಲಿ ಯಾರೊಬ್ಬನು ಸಹ ಹಿಂಜರಿಯುವುದಿಲ್ಲ. ಯಾ ರಸೂಲಲ್ಲಾಹ್!! ನಾನು ನಿಮ್ಮ ಮುಂದೆಯು ಯುದ್ಧವಾಡುವೆವು, ನಿಮ್ಮ ಹಿಂದೆಯು ಯುದ್ಧವಾಡುವೆವು, ನಿಮ್ಮ ಬಲಭಾಗದಲ್ಲಿಯು ಯುದ್ಧವಾಡುವೆವು ಮತ್ತು ಎಡಭಾಗದಲ್ಲಿಯು ಯುದ್ಧವಾಡುವೆವು ಮತ್ತು ವೈರಿಗಳು ನಮ್ಮ ಮೃತದೇಹಗಳನ್ನು ನಾಶಪಡಿಸಿದ ನಂತರವೇ ನಿಮ್ಮ ಬಳಿಗೆ ತಲುಪಲು ಸಾಧ್ಯವಾಗುವುದು.” (ಏಕ್ ಆಯತ್ ಕಿ ಪುರ್ ಮುಆರಿಫ್ ತಫ್ಸೀರ್, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–620–621)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸೂರಃ ರಅ್‌ದ್ ವಚನ 12 **ಲಹೂ ಮುಅಖ್ಖಿಬಾತುನ್ ಮಿನ್‌ಬೈನಿ ಯದೈಹಿ ವ ಮಿನ್ ಖಲ್‌ಫಿಹಿ ಯಹ್‌ಫಝೂನಹು ಮಿನ್ ಅಮ್‌ರಿಲ್ಲಾಹಿ.** ಅವರ (ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ) ಮುಂದೆ ಮತ್ತು ಹಿಂದೆ ಅಲ್ಲಾಹನ ಆಜ್ಞೆ ಪ್ರಕಾರ ಅವರನ್ನು ಕಾವಲು ಕಾಯುವ ದೇವದೂತರು (ಮಲಾಯಿಕ್) ಇದ್ದಾರೆ.

ಈ ವಚನದ ವ್ಯಾಖ್ಯಾನವಾಗಿ ಹೀಗೆ ಹೇಳುತ್ತಾರೆ: “ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ತಿನ ಸಂಪೂರ್ಣ ಕಾಲಾವಧಿಯು ಅಲ್ಲಾಹನ ವಾಗ್ದಾನದ ಈ ಸಂರಕ್ಷಣೆಯ ಸಾಕ್ಷ್ಯ ನೀಡುತ್ತದೆ.” ಮಕ್ಕದಲ್ಲಿ ಅವರನ್ನು ದೇವದೂತರೇ ಸಂರಕ್ಷಿಸುತ್ತಿದ್ದರು. ಹೀಗೆ ಆಗಿರಲಿಲ್ಲವಾದರೆ ಅಷ್ಟೆಲ್ಲಾ ಶತ್ರುಗಳಿಂದ ಸುತ್ತುವರಿಯಲ್ಪಟ್ಟ ಅವರ ಜೀವ ಹೇಗೆ ತಾನೆ ಸಂರಕ್ಷಿಸಲ್ಪಡಲು ಸಾಧ್ಯವಿತ್ತು. ಆದರೆ ಮದೀನಕ್ಕೆ ಹೋದ ನಂತರ ಅವರಿಗೆ ಇಬ್ಬಗೆಯ ಸಂರಕ್ಷಣೆ

ದೊರಕಿತು. ಆಕಾಶದ ದೇವದೂತರ ಮತ್ತು ಭೂಮಿಯ ದೇವದೂತರ ಎಂದರೆ ಸಹಾಬರ ಸಂರಕ್ಷಣೆ. ಬದರ್ ಯುದ್ಧ ಈ ಬಾಹ್ಯ ಮತ್ತು ಆಂತರಿಕ ಸಂರಕ್ಷಣೆಯ ಅತ್ಯಂತ ಉತ್ತಮ ಉದಾಹರಣೆಯಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನಕ್ಕೆ ಹೋದಾಗ ಮದೀನದ ನಿವಾಸಿಗಳೊಂದಿಗೆ ಹೀಗೆ ಒಪ್ಪಂದ ಮಾಡಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನದಿಂದ ಹೊರಗೆ ಹೋಗಿ ಯುದ್ಧ ಮಾಡುವುದಾದರೆ ಮದೀನದ ನಿವಾಸಿಗಳನ್ನು ತಮಗೆ ಸಹಾಯ ಮಾಡಬೇಕೆಂದು ನಿರ್ಬಂಧಿಸಬಾರದು. ಬದರ್ ಯುದ್ಧ ಪ್ರಾರಂಭಿಸುವ ಮೊದಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್‌ಸಾರ್ ಮತ್ತು ಮುಹಾಜಿರೀನ್‌ರೊಂದಿಗೆ ಸಮಾಲೋಚನೆ ನಡೆಸಿದರು. ಮುಹಾಜಿರ್‌ಗಳು ಪದೇ ಪದೇ ಮುಂದೆ ಬಂದು ಶತ್ರುಗಳನ್ನು ಎದುರಿಸುವ ಬಗ್ಗೆ ಒತ್ತಿ ಹೇಳುತ್ತಿದ್ದರು. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮತುಗಳನ್ನು ಆಲಿಸಿದ ನಂತರ ಸಹ ಹೇಳುತ್ತಿದ್ದರು: 'ಓ ಜನರೇ ಸಲಹೆ ನೀಡಿರಿ' ಎಂದು. ಆಗ ಒಬ್ಬ ಅನ್‌ಸಾರಿ ಸಹಾಬಿ ಸಅದ್ ಬಿನ್ ಮುಆದ್ ಹೇಳಿದರು: ಹುಝೂರ್ ನಮ್ಮನ್ನು ಉದ್ದೇಶಿಸಿ ಹೇಳುತ್ತಿರುವಿರೇನು? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೌದೆಂದು ಹೇಳಿದರು. ಆಗ ಆ ಸಹಾಬಿ ಹೇಳಿದರು: ನಿಸ್ಸಂಶಯವಾಗಿಯೂ ನಾವು ಹುಝೂರರೊಂದಿಗೆ ಆ ರೀತಿ ಒಪ್ಪಂದ ಮಾಡಿದ್ದೆವು. ಆ ಸಮಯ ಬೇರೆಯೇ ಆಗಿತ್ತು..." ಈಗ "ತಾವು ಸತ್ಯಸಂಧರಾದ ಸಂದೇಶವಾಹಕರು ಎಂದು ನಾವು ನೋಡಿರುವಾಗ ಈಗ ಈ ಸಮಾಲೋಚನೆಯ ಆವಶ್ಯಕತೆ ಏನಿದೆ. ತಾವು ಆಜ್ಞೆ ನೀಡುವುದಾದರೆ ನಾವು ನಮ್ಮ ಕುದುರೆಗಳನ್ನು ಸಮುದ್ರದೊಳಗೆ ಹಾಕುವೆವು. ನಾವು ಪ್ರವಾದಿ ಮೂಸಾರ ಅನುಯಾಯಿಗಳ ಹಾಗೆ, "ನೀನು ಮತ್ತು ನಿನ್ನ ಪ್ರಭು ಹೋಗಿ ಹೋರಾಡಿರಿ. ನಾವು ಇಲ್ಲಿಯೇ ಕುಳಿತಿರುವೆವು" ಎಂದು ಹೇಳಲಾರೆವು. ಬದಲಾಗಿ ಹುಝೂರರ ಬಲಭಾಗದಲ್ಲೂ ಎಡಭಾಗದಲ್ಲೂ ಮುಂದೆಯೂ ಹಿಂದೆಯೂ ನಿಂತು ನಾವು ಹೋರಾಡುವೆವು. ಶತ್ರು ಖಂಡಿತವಾಗಿಯೂ ನಿಮ್ಮ ಸಮೀಪಕ್ಕೆ ತಲಪಲಾರರು – ನಮ್ಮ ಶವಗಳನ್ನು ತುಳಿಯುತ್ತಾ ಮುಂದೆ ಸಾಗಿ ಹೊರತು." ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಿಷ್ಠಾವಂತರಾದ ಈ ಸಹಾಬರು ನನ್ನ ಅಭಿಪ್ರಾಯದಲ್ಲಿ ಮುಅಖ್ಖಿಬಾತ್ ಆಗಿದ್ದರು ಅಂದರೆ ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂರಕ್ಷಿಸಲು ನಿಶ್ಚಯಿಸಿದ ಮುಅಕ್ಕಿಬಾತ್ (ಕಾವಲುಗಾರರು) ಗಳಲ್ಲಿ ಸೇರಿದವರಾಗಿದ್ದರು. ಒಬ್ಬ ಸಹಾಬಿ ಹೇಳುತ್ತಾರೆ: ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಹದಿಮೂರು ಯುದ್ಧಗಳಲ್ಲಿ ಭಾಗವಹಿಸಿದ್ದೆ. ಆದರೆ ನನ್ನ ಹೃದಯದಲ್ಲಿ ಪದೇ ಪದೇ ಹೀಗೆ ಆಶಿಸುತ್ತಿದ್ದೆ – ಈ ಯುದ್ಧಗಳಲ್ಲಿ ಭಾಗವಹಿಸುವುದಕ್ಕೆ ಬದಲಾಗಿ ಸಅದ್ ಬಿನ್ ಮುಆದರ ಬಾಯಿಯಿಂದ ಹೊರಟ ಶಬ್ದಗಳನ್ನು ನಾನು ನುಡಿಯುವವನಾಗಿರುತ್ತಿದ್ದರೆ ಎಂದು." (ತಫ್‌ಸೀರೆ ಕಬೀರ್, ಸಂಪುಟ–03, ಪುಟ–392)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಉಹುದ್ ಯುದ್ಧದಲ್ಲಿ ಸಅದ್ ಬಿನ್ ಮುಆಝ್(ರ) ರವರ ನಿಷ್ಠೆಯ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಬರೆಯುತ್ತಾರೆ:

"ಇಸ್ಲಾಮಿನ ಸೈನ್ಯವೂ ತಮ್ಮ ಡೇರೆಗಳನ್ನು ಇರಿಸಿದ ಸ್ಥಳವು ಉತ್ತಮ ಸ್ಥಳವಾಗಿರಲಿಲ್ಲ." ಯುದ್ಧಕ್ಕೆ ಅನುಗುಣವಾಗಿರಲಿಲ್ಲ. "ಅದಕ್ಕೆ ಹುಬ್ಬಾಬ್ ಬಿನ್ ಮುನ್‌ಝಿರ್(ರ) ರವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಲ್ಲಿ ಕೇಳಿದರು ನೀವು ಅಲ್ಲಾಹನ ಆಜ್ಞೆಯ ಪ್ರಕಾರ ಈ ಸ್ಥಳವನ್ನು ಇಷ್ಟಪಟ್ಟಿದ್ದೀರೋ ಅಥವಾ ಸೈನಿಕರ ಉಪಾಯಕ್ಕಾಗಿ ಈ ಸ್ಥಳವನ್ನು ಇಷ್ಟಪಟ್ಟಿದ್ದೀರ? ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಇದರ ಬಗ್ಗೆ ಯಾವ ಆಜ್ಞೆಯು ಅಲ್ಲಾಹನು ನೀಡಲಿಲ್ಲ. ನೀವು ಏನಾದರು ಸಲಹೆ ನೀಡಬೇಕಾದರೆ ನೀಡಿರಿ. ಹುಬ್ಬಾಬ್(ರ) ಹೇಳಿದರು ನನ್ನ ಪ್ರಕಾರ ಈ ಸ್ಥಳವು ಉತ್ತಮವಾಗಿಲ್ಲ." ಯುದ್ಧಕ್ಕೋಸ್ಕರ. "ನಾವು ಮುಂದೆ ಸಾಗಿ ಖುರೈಶರ ಸಮೀಪದ ಒಂದು ಚಿಲುಮೆಯನ್ನು ಸ್ವಾಧೀನ ಪಡೆಯುವುದು ಉತ್ತಮವಾಗುವುದು. ನನಗೆ ಆ ಚಿಲುಮೆಯ ಬಗ್ಗೆ ಅರಿವಿದೆ. ಅದರ ನೀರು ಸಹ ಉತ್ತಮವಾಗಿದೆ. ರಸೂಲುಲ್ಲಾಹ್(ಸ) ರವರು ಇವರ ಈ ಸಲಹೆಯನ್ನು ಇಷ್ಟಪಟ್ಟರು. ಖುರೈಶರ ಗುಡ್ಡದ ಇನ್ನೊಂದು ಕಡೆಯಲ್ಲಿ ತಂಗಿದ್ದರಿಂದ ಆ ಚಿಲುಮೆಯ ಬಳಿ ಯಾರು ಇರಲಿಲ್ಲ ಹೀಗೆ ಮುಸ್ಲಿಮರು ಮುಂದೆ ಸಾಗಿ ಆ ಚಿಲುಮೆಯನ್ನು ಸ್ವಾಧೀನಗೊಳಿಸಿಕೊಂಡರು. ಆದರೆ ಪವಿತ್ರ ಖುರ್‌ಆನಿನಲ್ಲಿಯು ಸಹ ಉಲ್ಲೇಖವಿದೆ ಆ ಸಂದರ್ಭದಲ್ಲಿ ಆ ಚಿಲುಮೆಯಲ್ಲಿ ನೀರು ಕಡಿಮೆಯಾಗಿತ್ತು. ಆದ್ದರಿಂದ ಮುಸ್ಲಿಮರಿಗೆ ನೀರಿನ ಕೊರತೆ ಆಗುತ್ತಿತ್ತು. ಅದೇ ರೀತಿ ಮುಸ್ಲಿಮರು ಇದ್ದ ಸ್ಥಳವೂ ಸಹ ಉತ್ತಮವಾಗಿರಲಿಲ್ಲ ಅಲ್ಲಿ ಮರಳು ಬಹಳ ಪ್ರಮಾಣದಲ್ಲಿದ್ದ ಕಾರಣ ಅವರ ಕಾಲುಗಳು ಸರಿಯಾಗಿ ಸ್ಥಿರವಾಗಿರಿಸಲು ಆಗುತ್ತಿರಲಿಲ್ಲ.

ಸ್ಥಳದ ಆಯ್ಕೆಯ ನಂತರ ಔಸ್ ಗೋತ್ರದ ಮುಖಂಡರಾಗಿದ್ದ ಸಅದ್ ಬಿನ್ ಮುಆಝ್(ರ) ರವರ ಸಲಹೆಯ ಮೇರೆಗೆ ಸಹಾಬರವರು ಮೈದಾನದ ಒಂದು ಭಾಗದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗಾಗಿ ಒಂದು ಛಪ್ಪರವನ್ನು ಸಿದ್ಧಗೊಳಿಸಿದರು. ಸಅದ್(ರ) ರವರು ರಸೂಲುಲ್ಲಾಹ್(ಸ) ರವರ ಸವಾರಿಯನ್ನು ಆ ಛಪ್ಪರದ ಸಮೀಪ ಕಟ್ಟಿ ಹೇಳಿದರು "ಯಾ ರಸೂಲಲ್ಲಾಹ್!! ನೀವು ಈ ಛಪ್ಪರದಲ್ಲಿ ಆಸೀನರಾಗಿರಿ ನಾವು ಅಲ್ಲಾಹನ ನಾಮವನ್ನುಚ್ಚರಿಸಿ ವೈರಿಗಳ ವಿರುದ್ಧ ಹೋರಾಡುವೆವು. ಅಲ್ಲಾಹನು ನಮಗೆ ವಿಜಯ ನೀಡಿದರೆ ಇದು ನಮ್ಮ ಆಸೆ ಆಗಿದೆ. ಅಲ್‌ಹಮ್‌ದುಲಿಲ್ಲಾಹ್. ಆದರೆ ಈ ವಿಷಯವು ವಿರುದ್ಧವಾದರೆ ನೀವು ಹೇಗಾದರೂ ಮಾಡಿ ನಿಮ್ಮ ಸವಾರಿಯೊಂದಿಗೆ ಮದೀನಕ್ಕೆ ತಲುಪಿರಿ." ಈ ಛಪ್ಪರದೊಂದಿಗೆ ಒಂದು ಉತ್ತಮವಾದ ಸವಾರಿಯನ್ನು ನಿಮಗಾಗಿ ಕಟ್ಟಿದ್ದೇವೆ. ತದನಂತರ ಅವರು ಹೇಳಿದರು ನೀವು ಇದರ ಸಹಾಯದಿಂದ ಮದೀನಕ್ಕೆ ತಲುಪಿರಿ ಎಂದು. "ಅಲ್ಲಿ ನಮ್ಮ ಸಹೋದರರು ಹೇಗಿದ್ದಾರೆ ಎಂದರೆ ಅವರು ಬಹಳ ಪ್ರೀತಿ ಮತ್ತು ನಿಷ್ಠೆಯುವುಳ್ಳವರಾಗಿದ್ದಾರೆ ಆದರೆ ಅವರಿಗೆ ಈ ಯೋಜನೆಯಲ್ಲಿ ಯುದ್ಧ ಮಾಡಬೇಕೆಂದು ಯೋಚಿಸಿರಲಿಲ್ಲ ಆದ್ದರಿಂದ ಅವರು ನಮ್ಮೊಂದಿಗೆ ಆಗಮಿಸಲಿಲ್ಲ. ಇಲ್ಲದಿದ್ದರೆ ಅವರು ಅವಶ್ಯಕವಾಗಿ ಇದರಲ್ಲಿ ಭಾಗವಹಿಸುತ್ತಿದ್ದರು. ಆದರೆ ಅವರಿಗೆ ಈ ಪರಿಸ್ಥಿತಿಯ ಬಗ್ಗೆ ತಿಳಿದರೆ ಅವರು ಅವಶ್ಯಕವಾಗಿ ನಿಮ್ಮನ್ನು ಸಂರಕ್ಷಣೆ ನೀಡುತ್ತಾರೆ. ಇದು ಸಅದ್(ರ) ರವರ ನಿಷ್ಠೆ ಆಗಿತ್ತು. ಎಂತಹ ಪರಿಸ್ಥಿಯಾದರು ಅವರ ಉತ್ಸಾಹ ಭರಿತರಾಗಿರುತ್ತಿದ್ದರು ಇದು ಶ್ಲಾಘನೀಯವಾಗಿತ್ತು. ಇಲ್ಲದಿದ್ದರೆ ಅಲ್ಲಾಹನ ಸಂದೇಶಾಹಕರು ಎಂದೂ ರಣಭೂಮಿಯಿಂದ ಓಡಿ ಹೋಗುವವರಲ್ಲ!" ರಸೂಲುಲ್ಲಾಹ್(ಸ) ರವರು ಯಾವಾಗಲೂ ಯುದ್ಧದ ಮೈದಾನಗಳಲ್ಲಿ ಮುಂದಿನ ಪಂಕ್ತಿಯಲ್ಲಿರುತ್ತಿದ್ದರು. "ಹುನೈನ್ ಯುದ್ಧದಲ್ಲಿ ಹನ್ನೆರಡು ಸಾವಿರ ಸೈನಿಕರು ಯುದ್ಧದಿಂದ ಹಿಂದಿರುಗಿದರು. ಆದರೆ ತೌಹೀದಿನ ಈ ಕೇಂದ್ರ (ಅಂದರೆ ರಸೂಲುಲ್ಲಾಹ್(ಸ)) ತಮ್ಮ ಜಾಗದಿಂದ ಅಲ್ಲಾಡಲಿಲ್ಲ. ಏನೇ ಇರಲಿ ಛಪ್ಪರ ಸಿದ್ಧವಾಯಿತು." ಸಅದ್ ಹೇಳಿದ ಹಾಗೆ. ಸಅದ್ ಮತ್ತು ಕೆಲ ಅನ್ಸಾರ್ ಸಹಾಬರವರು ಆ ಛಪ್ಪರಕ್ಕೆ ಕಾವಲು ನೀಡಿದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮತ್ತು ಹಝ್ರತ್ ಅಬೂಬಕ್ಕರ್(ರ) ರವರು ಈ ಛಪ್ಪರದಲ್ಲಿ ರಾತ್ರಿ ಕಳೆದರು. ರಸೂಲುಲ್ಲಾಹ್(ಸ) ರವರು ಇಡೀ ರಾತ್ರಿ ಅಲ್ಲಾಹನ ಆಸ್ಥಾನದಲ್ಲಿ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಹೀಗೆ ಇಡೀ ಸೈನ್ಯದಲ್ಲಿ ಕೇವಲ ರಸೂಲುಲ್ಲಾಹ್(ಸ) ಮಾತ್ರ ರಾತ್ರಿ ಎಚ್ಚರಗೊಂಡಿದ್ದರು. ಉಳಿದವರೆಲ್ಲರು ತಮ್ಮ ತಮ್ಮ ಬಾರಿಯಲ್ಲಿ ನಿದ್ರಿಸಿದರು." (ಸೀರತ್ ಖಾತುಮುನ್ನಬೀಯೀನ್(ಸ) ಪುಟ–356–357)

ಉಹದ್ ಯುದ್ಧದ ಸಂದರ್ಭದಲ್ಲಿ ಶುಕ್ರವಾರ ರಾತ್ರಿ ಹಝ್ರತ್ ಸಅದ್ ಬಿನ್ ಮುಆಝ್(ರ). ಹಝ್ರತ್ ಉಸೈದ್ ಬಿನ್ ಹುಝೈರ್(ರ) ಮತ್ತು ಹಝ್ರತ್ ಸಅದ್ ಬಿನ್ ಉಬಾದ(ರ) ಮಸ್ಜಿದೆ ನಬವಿಯಲ್ಲಿ ಆಯುಧಗಳನ್ನು ಧರಿಸಿ ರಸೂಲುಲ್ಲಾಹ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಾಗಿಲಿಗೆ ಕಾವಲು ನೀಡುತ್ತಿದ್ದರು. ಉಹದ್ ಯುದ್ಧದ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರು ಕುದುರೆಯ ಮೇಲೆ ಸವಾರರಾಗಿ ಮತ್ತು ಬಿಲ್ಲನ್ನು ತಮ್ಮ ಹೆಗಲಿನ ಮೇಲಿರಿಕೊಂಡು ಅದೇ ರೀತಿ ತಮ್ಮ ಬರ್ಛಿಯನ್ನು ಕೈನಲ್ಲಿರಿಸಿಕೊಂಡು ಮದೀನಕ್ಕೆ ರವಾನೆಯಾದಾಗ ಹಝ್ರತ್ ಸಅದ್ ಬಿನ್ ಮುಆಝ್(ರ) ಹಾಗೂ ಹಝ್ರತ್ ಸಅದ್ ಬಿನ್ ಉಬಾದ(ರ) ಅವರಿಬ್ಬರು ನಿಮ್ಮ ಮುಂದೆ ಮುಂದೆ ಓಡುತ್ತಿದ್ದರು. ಅವರಿಬ್ಬರು ಸಹ ಕವಚಗಳನ್ನು ಧರಿಸಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–2, ಪುಟ–20–30, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಉಹುದ್ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಬರೆಯುತ್ತಾರೆ: "ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರ ದೊಡ್ಡ ಗುಂಪಿನೊಂದಿಗೆ ಅಸರ್ ನಮಾಝ್ ನಂತರ ಮದೀನದಿಂದ ಉಹುದ್ ಕಡೆಗೆ ಹೊರಟರು. ಔಸ್ ಮತ್ತು ಖಝ್‌ರಜ್ ಗೋತ್ರಗಳ ಮುಖಂಡರಾದ ಸಅದ್ ಬಿನ್ ಮುಆದ್ ಮತ್ತು ಸಅದ್ ಬಿನ್ ಉಬಾದ ಹಝ್ರತ್ ಪೈಗಂಬರರ ಸವಾರಿ ಮೃಗದ ಮುಂದೆ ಮೆಲ್ಲಮೆಲ್ಲಗೆ ಓಡುತ್ತಾ ಮುಂದೆ ಸಾಗುತ್ತಿದ್ದರು. ಇನ್ನುಳಿದ ಸಹಾಬರು ಅವರ ಎಡಬಲಗಳಲ್ಲಿಯೂ ಹಿಂಭಾಗದಲ್ಲಿಯೂ ನಡೆಯುತ್ತಾ ಹೋಗುತ್ತಿದ್ದರು." (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–486)

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧದಿಂದ ಮರಳಿ ಬಂದಾಗ ಹಝ್ರತ್ ಸಅದ್ ಬಿನ್ ಮುಆದ್ ಮತ್ತು ಹಝ್ರತ್ ಸಅದ್ ಬಿನ್ ಉಬಾದರ ಸಹಾಯ ಪಡೆಯುತ್ತಾ ತಮ್ಮ ಮನೆಗೆ ಪ್ರವೇಶಿಸಿದರು. (ಸಬಲುಲ್ ಹುದಾ ವರ್‌ರ‍ಶಾದ್, ಸಂಪುಟ–4, ಪುಟ–229, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಸಅದ್ ಬಿನ್ ಮುಆದರ ಮಾತೆಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಎಷ್ಟು ಪ್ರೀತಿ ಇತ್ತು ಎಂಬುದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಉಹುದ್ ಯುದ್ಧದಿಂದ ಮರಳುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸವಾರಿ ಮೃಗದ ಕಡಿವಾಣವನ್ನು ಹಝ್ರತ್ ಸಅದ್ ಬಿನ್ ಮುಆದ್ ಹಿಡಿದುಕೊಂಡು ಹೆಮ್ಮೆಯಿಂದ ನಡೆದುಕೊಂಡು ಹೋಗುತ್ತಿದ್ದರು. ಆ ಯುದ್ಧದಲ್ಲಿ ಹಝ್ರತ್ ಸಅದರ ಸಹೋದರ ಶಹೀದರಾಗಿದ್ದರು. ಹಝ್ರತ್ ಸಅದರ ಮಾತೆಯ ಪ್ರಾಯ ಆಗ ಎಂಬತ್ತು ಅಥವಾ ಎಂಬತ್ತೆರಡಾಗಿತ್ತು. ಅವರ ದೃಷ್ಟಿ ಬಲಹೀನವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧದಲ್ಲಿ ಶಹೀದರಾದರು ಎಂಬ ವದಂತಿ ಹಬ್ಬಿದಾಗ ಆ ವೃದ್ಧೆ ಸಹ ಹೇಗೋ ಮದೀನದ ಹೊರಗೆ ಹೋಗುತ್ತಿದ್ದಳು. ಹಝ್ರತ್ ಸಅದ್ ದೂರದಿಂದ ನೋಡಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ನನ್ನ ಮಾತೆ ಬರುತ್ತಿದ್ದಾರೆ. ಆ ವೃದ್ಧೆ ಸಮೀಪಕ್ಕೆ ಬಂದಾಗ ಆಕೆ ತನ್ನ ಮಕ್ಕಳ ಬಗ್ಗೆ ವಿಚಾರಿಸಲಿಲ್ಲ ಆಕೆ ಕೇಳಿದರು ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಲ್ಲಿದ್ದಾರೆ ಎಂದು. ಹಝ್ರತ್ ಸಅದ್ ಹೇಳಿದರು: ಅವರು ನಿಮ್ಮ ಮುಂದೆಯೇ ಇದ್ದಾರೆ. ಆಕೆ ತನ್ನ ದೃಷ್ಟಿಯನ್ನು ಮೇಲೆತ್ತಿದರು. ಅವರ ಬಲಹೀನ ದೃಷ್ಟಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖ ಚಹರೆಯ ಮೇಲೆ ಹರಡಿ ಅಲ್ಲಿಯೇ ಉಳಿಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬೀಬಿ, ನನಗೆ ದುಃಖವಾಗುತ್ತಿದೆ ನಿಮ್ಮ ತರುಣನಾದ ಪುತ್ರ ಈ ಯುದ್ಧದಲ್ಲಿ ಶಹೀದನಾದನು. ವೃದ್ಧಾಪ್ಯದಲ್ಲಿ ಇಂತಹ ಸಮಾಚಾರ ಆಲಿಸುವಾಗ ಮತಿಭ್ರಮೆ ಸಂಭವಿಸುವ ಸಾಧ್ಯತೆಗಳಿವೆ. ಆದರೆ ಆ ವೃದ್ಧೆ ಎಷ್ಟು ಪ್ರೀತಿಯಿಂದ ಉತ್ತರ ನೀಡಿದರೆಂದರೆ, ಅವರು ಹೇಳಿದರು: ನೀವು ಎಂತಹ ಮಾತುಗಳನ್ನು ಆಡುತ್ತಿರುವಿರಿ. ನನಗೆ ತಮ್ಮ ಸುರಕ್ಷತೆ ಬಗ್ಗೆ ಮಾತ್ರ ಚಿಂತೆ ಇತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಘಟನೆ ವಿವರಿಸಿದ ನಂತರ ಅಹ್ಮದಿ ಮಹಿಳೆಯರೊಂದಿಗೆ ತಬ್ಲೀಗ್ ಮಾಡುವ ಕರ್ತವ್ಯದ ಬಗ್ಗೆ ಗಮನ ಹರಿಸುತ್ತಾ ಹೇಳಿದರು: ಇಂತಹ ಮಹಿಳೆಯರೇ ಇಸ್ಲಾಮಿನ ತಬ್ಲೀಗ್ ಮತ್ತು ಪ್ರಚಾರದಲ್ಲಿ ಪುರುಷರ ಹಾಗೆಯೇ ಕಾರ್ಯ ನಿರತರಾಗಿರುತ್ತಿದ್ದರು. ಇಂತಹ ಮಹಿಳೆಯರ ಬಲಿದಾನಗಳ ಬಗ್ಗೆ ಇಸ್ಲಾಮೀ ಲೋಕ ಅಭಿಮಾನ ಗೊಳ್ಳುತ್ತಿದೆ. ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವುದಾಗಿ ವಾದಿಸುತ್ತಿರುವಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿರೂಪವಾಗಿದ್ದಾರೆ. ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ ನೀವು ಆ ಸಹಾಬಿಯಾತ್‌ಗಳ ಪ್ರತಿರೂಪ ಆಗಿರುವಿರಿ. ಆದರೆ ನೀವು ಸತ್ಯವಾಗಿ ಹೇಳಿರಿ ಏನು ನಿಮ್ಮೊಳಗೆ ಧರ್ಮದ ಬಗ್ಗೆ ಸಹಾಬಿಯಾತ್‌ಗಳಿಗಿದ್ದ ಆವೇಶ ಇದೆಯೇ? ಆ ಸಹಾಬಿಯಾತ್‌ಗಳಲ್ಲಿದ್ದ ಪ್ರಕಾಶ ನಿಮ್ಮಲ್ಲಿದೆಯೇ? ನಿಮ್ಮ ಮಕ್ಕಳು ಸಹಾಬಿಯಾತ್‌ಗಳ ಮಕ್ಕಳ ಹಾಗೆ ಒಳ್ಳೆಯವರಾಗಿರುವರೋ. ನೀವು ಚಿಂತಿಸುವುದಾದರೆ ನೀವು ಸಹಾಬಿಯಾತ್‌ಗಳಿಗಿಂತ ಬಹಳ ಹಿಂದಿನ ಸ್ಥಾನದಲ್ಲಿರುವುದಾಗಿ ಕಾಣುವಿರಿ. ಆ ಸಹಾಬಿಯಾತ್‌ಗಳು ಮಾಡಿದ ಬಲಿದಾನಗಳು ಹೇಗಿದ್ದುವು ಎಂದರೆ ಇಂದಿನ ತನಕ ಲೋಕದ ಪರದೆಯಲ್ಲಿ ಅಂತಹ ಬೇರೆ ಉದಾಹರಣೆ ಕಾಣಲು ಸಿಗುವುದಿಲ್ಲ. ಅವರು ತಮ್ಮ ಜೀವಾರ್ಪಣೆಗಳನ್ನು ಮಾಡಿ ನೀಡಿದ ಬಲಿದಾನಗಳು ಅಲ್ಲಾಹನಿಗೆ ಎಷ್ಟು ಪ್ರಿಯಕರವಾಯಿತೆಂದರೆ ಅಲ್ಲಾಹನು ಬಹಳ ಬೇಗನೇ ಅವರಿಗೆ ಜಯವನ್ನು ದಯಪಾಲಿಸಿದನು. ಇತರ ಜನಾಂಗಗಳಿಗೆ ಶತಮಾನಗಳ ಕಾಲದಲ್ಲಿಯೂ ಮಾಡಲು ಅಸಾಧ್ಯವಾಗಿದ್ದ ಕಾರ್ಯಗಳನ್ನು ಸಹಾಬರು ಮತ್ತು ಸಹಾಬಿಯಾತ್‌ಗಳು ಕೆಲವೇ ವರ್ಷಗಳಲ್ಲಿ ಮಾಡಿ ತೋರಿಸಿದರು.

(ಫೀಝು ಎ ತಬ್‌ಲೀಗ್ ಔರ್ ಅಹ್ಮದಿ ಖವಾತೀನ್, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–400–401)

ಇಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮಹಿಳೆಯರನ್ನು ಸಂಬೋಧಿಸಿ ಭಾಷಣ ಮಾಡುವಾಗ ಅಹ್ಮದಿ ಮಹಿಳೆಯರ ಬಗ್ಗೆ ಪ್ರಸ್ತಾಪಿಸಿದರು. ಆದರೆ ಅಸಂಖ್ಯಾತ ಸ್ಥಳಗಳಲ್ಲಿ ಯಾವಾಗಲೂ ಹಿಂದಿನ ಖಲೀಫರು ಹೇಳುತ್ತಾ ಇದ್ದರು ಮತ್ತು ನಾನು ಸಹ ಅಸಂಖ್ಯಾತ ಸಂದರ್ಭಗಳಲ್ಲಿ ಹೇಳಿದ್ದೇನೆ: ನಮ್ಮ ಪುರುಷರು ಸಹ ಸಹಾಬಿಗಳು ತೋರಿಸಿದಂತಹ ಉದಾಹರಣೆಗಳನ್ನು ತೋರಿಸಬೇಕೆಂದು. ಹಾಗೆ ಆದರೆ ಮಾತ್ರವೇ ನಾವು ಲೋಕದಲ್ಲಿ ಇಸ್ಲಾಮಿನ ಸಂದೇಶ ಹರಡುವೆವು ಮತ್ತು ಲೋಕವನ್ನು ಇಸ್ಲಾಮಿನ ಪತಾಕೆಯ ಅಡಿಯಲ್ಲಿ ತರುವೆವು ಎಂಬ ನಮ್ಮ ವಾದವನ್ನು ಈಡೇರಿಸಲು ಸಾಧ್ಯವಾಗುವುದು. ನಮ್ಮ ಬಲಿದಾನಗಳು ಮತ್ತು ನಮ್ಮ ಕಾರ್ಯವಿಧಾನಗಳು ನಮ್ಮ ಮುಂದೆ ಸಹಾಬರು ಇರಿಸಿರುವ ಕರ್ಮಗಳ ಉದಾಹರಣೆಗಳಿಗೆ ಅನುಸಾರವಾಗಿರಬೇಕು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಕ್ರೈಸ್ತರು ಮರಿಯಮ್ ಮಗ್ದಲೀನಿ ಮತ್ತು ಆಕೆಯ ಸಂಗಡಿಗ ಮಹಿಳೆಯರ ಧೈರ್ಯವನ್ನು ಕಂಡು ಸಂತೋಷಗೊಳ್ಳುತ್ತಾರೆ ಅಂದರೆ ಅವರು ಈಸ ಮಸೀಹರ ಖಬರ್ ಬಳಿ ಮುಂಜಾನೆಯ ಹೊತ್ತು ವೈರಿಗಳಿಂದ ತಪ್ಪಿಸಿಕೊಂಡು ತಲುಪಿದ್ದರು ಎಂದು. ನಾನು ಅವರಿಗೆ ಹೇಳುತ್ತೇನೆ ನನ್ನ ಬಳಿ ಬಂದು ನನ್ನ ಪ್ರೀಯತಮೆಯಾದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಿಷ್ಠಾವಂತ ಜನರನ್ನು ಕಾಣಿರಿ ಅವರು ಎಂತಹ ಪರಿಸ್ಥಿತಿಗಳಲ್ಲಿ ಅವರನ್ನು ಬೆಂಬಲ ನೀಡಿದರು ಮತ್ತು ಅವರು ಎಂತಹ ಪರಿಸ್ಥಿತಿಯಲ್ಲಿ ಅವರು ತೌಹೀದಿನ ಪತಾಕೆಯನ್ನು ಎತ್ತಿ ಹಿಡಿದರು. ಇಂತಹ ಇನ್ನೊಂದು ನಿಷ್ಠೆಯ ಉದಾಹರಣೆಯು ಇತಿಹಾಸದಲ್ಲಿ ಕಂಡುಬರುತ್ತದೆ. ಒಮ್ಮೆ ರಸೂಲುಲ್ಲಾಹ ಸಲ್ಲಲ್ಲಾಹು ಅಲೈಹಿವಸಲ್ಲಮರು ಶಹೀದ್ ಆದವರನ್ನು ದಫನ್ ಮಾಡಿ ಮದೀನಕ್ಕೆ ಆಗಮಿಸಿದಾಗ ಮಹಿಳೆಯರು ಮತ್ತು ಮಕ್ಕಳು ಪಟ್ಟಣದಿಂದ ಹೊರಗೆ ಅವರನ್ನು ಸ್ವಾಗತಿಸಲು ಆಗಮಿಸಿದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಒಂಟೆಯ ಲಗಾಮನ್ನು ಹಝ್ರತ್ ಸಅದ್ ಬಿನ್ ಮುಆಝ್(ರ) ಹಿಡಿದುಕೊಂಡು ಹೆಮ್ಮೆಯಿಂದ ಮುಂದೆ ಓಡುತ್ತಿದ್ದರು. ಅವರು ರಸೂಲುಲ್ಲಾಹ್(ಸ) ರವರನ್ನು ನಾವು ರಕ್ಷಣೆ ನೀಡಿ ಅವರನ್ನು ತಮ್ಮ ಮನೆಗೆ ಹಿಂದಿರುಗಿಸಿದ್ದೇವೆ ಎಂದು ಲೋಕಕ್ಕೆ ತೋರಿಸುತ್ತಿದ್ದಾರೆ ಎಂದು ಭಾಸವಾಗುತ್ತಿತ್ತು. ರಸ್ತೆಯಲ್ಲಿ ಅವರ ತಾಯಿ ವೃದ್ಧೆ ಆಗಿದ್ದರು ಅವರ ದೃಷ್ಠಿ ಬಲಹೀನವಾಗಿತ್ತು ಅವರು ಸಹ ಅಲ್ಲಿ ಆಗಮಿಸಿದ್ದರು. ಉಹದ್ ಯುದ್ಧದಲ್ಲಿ ಅವರ ಓರ್ವ ಪುತ್ರ ಅಮರ್ ಬಿನ್ ಮುಆಝ್ ಸಹ ಮೃತನಾಗಿದ್ದರು. ಅವರನ್ನು ಕಂಡು ಸಅದ್ ಬಿನ್ ಮುಆಝ್(ರ) ಹೇಳಿದರು ಯಾ ರಸೂಲಲ್ಲಾಹ್!! ನನ್ನ ತಾಯಿ ಬರುತ್ತಿದ್ದಾರೆ. ಅದಕ್ಕೆ ರಸೂಲಲ್ಲಾಹ್(ಸ) ಹೇಳಿದರು ಅಲ್ಲಾಹನ ಅನುಗ್ರಹಗಳೊಂದಿಗೆ ಆಗಮಿಸಲಿ. ಆ ವೃದ್ಧೆ ಮುಂದೆ ಸಾಗಿ ತಮ್ಮ ಬಲಹೀನ ದೃಷ್ಠಿಯಿಂದ ಅಲ್ಲಿ ಇಲ್ಲಿ ನೋಡಿ ರಸೂಲುಲ್ಲಾಹ್(ಸ) ಅವರನ್ನು ನೋಡಿದರು. ಕೊನೆಗೆ ರಸೂಲುಲ್ಲಾಹ್(ಸ) ರವರ ಮುಖ ಚಹರೆಯನ್ನು ಗುರುತಿಸಿ ಸಂತೋಷಗೊಂಡಳು. ರಸೂಲುಲ್ಲಾಹ್(ಸ) ಹೇಳಿದರು ತಾಯಿ! ನನಗೆ ದುಃಖವಾಗುತ್ತಿದೆ ನಿಮ್ಮ ತರುಣನಾದ ಪುತ್ರ ಈ ಯುದ್ಧದಲ್ಲಿ ಶಹೀದನಾದನು. ಅದಕ್ಕೆ ಆಕೆಯು ಹೇಳಿದರು. ಹುಝೂರ್(ಸ)!! ನಾನು ನಿಮ್ಮನ್ನು ಕ್ಷೇಮವಾಗಿ ನೋಡಿತ್ತಿರುವಾಗ ನಾನು ನನ್ನ ಆ ಸಂಕಷ್ಟವನ್ನು ಉರಿದು ತಿಂದಿಬಿಟ್ಟಿದ್ದೇನೆ." ಎಂತಹ ಅದ್ಭುತವಾದ ಈ ವಾಕ್ಯವಾಗಿದೆ. ಈ ವಾಕ್ಯದಲ್ಲಿ ಪ್ರೀತಿಯ ಭಾವನೆಗಳು ಎಷ್ಟರ ಮಟ್ಟಿಗೆ ಅಡಕವಾಗಿದೆ ನೋಡಿರಿ. ದುಃಖ ಮನುಷ್ಯನಿಗೆ ತಿನ್ನುತ್ತದೆ. ಆದರೆ ಇಲ್ಲಿ ಆ ವೃದ್ಧೆಯು ಹೇಗೆ ಧೈರ್ಯದಿಂದ ಹೇಳುತ್ತಾಳೆ ನನ್ನ ಪುತ್ರನ ಬಗ್ಗೆ ನಗೆ ದುಃಖವಿಲ್ಲ ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಜೀವಂತವಾಗಿ ನೋಡಿದ್ದೇನೆ ನನಗೆ ಅಷ್ಟೆ ಸಾಕು. ನನಗೆ ದುಃಖ ತಿನ್ನುವುದಿಲ್ಲ ಆದರೆ ನಾನು ದುಃಖವನ್ನು ತಿನ್ನುತ್ತೇನೆ. ನನ್ನ ಪುತ್ರನ ಮರಣವು ನನ್ನನ್ನು ಕೊಲ್ಲುವುದಿಲ್ಲ, ಬದಲಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೋಸ್ಕರ ಆತನು ಜೀವ ಅರ್ಪಿಸಿದನು ಎಂದು." ಅಂದರೆ ಈ ಯೋಚನೆಯು ನನ್ನಲ್ಲಿ ಜೀವ ತುಂಬುತ್ತದೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಅನ್ಸಾರ್‌ಗಳನ್ನು ಉದ್ದೇಶಿಸಿ ಹೇಳುತ್ತಾರೆ: ಎಲೈ ಅನ್ಸಾರ್!! ನನ್ನ ಜೀವನವೂ ನಿಮಗಾಗಿ ಅರ್ಪಿತವಾಗುವುದು. ನೀವು ಎಷ್ಟರ ಮಟ್ಟಿಗೆ ಒಳಿತನ್ನು ತೆಗೆದುಕೊಂಡು ಹೋಗುತ್ತಿದ್ದೀರಿ." (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–256–257)

ಕಅಬನ ವಿರುದ್ಧ ಪ್ರತಿಜ್ಞಾ ಭಂಗ, ವಿದ್ರೋಹ, ಯುದ್ಧ ಮಾಡಲು ಪ್ರೋತ್ಸಾಹ, ಹಿಂಸಾಚಾರ, ಅಶ್ಲೀಲ ಹೇಳಿಕೆ, ಕೊಲೆ ಯತ್ನ ಮೊದಲಾದ ದೋಷಾರೋಪಗಳು ಸಾಬೀತಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅಬ್ ಬಿನ್ ಅಶ್ರಫನು ಅವನ ಕುಕೃತ್ಯಗಳ ಕಾರಣದಿಂದ ವಧಾರ್ಹನೆಂದು ವಿಧಿಸಿದರು. ಅದರಲ್ಲಿಯು ಅನ್ಸಾರ್‌ನ ಒಂದು ಗೋತ್ರದ ಮುಖಂಡರಾದ ಹಝ್ರತ್ ಸಅದ್ ಬಿನ್ ಮುಆಝ್(ರ) ರವರ ಸಲಹೆಗಳನ್ನು ಸಹ ಪಡೆದಿದ್ದರು. ಅದನ್ನು ವಿವರವಾಗಿ ಕಅಬ್ ಬಿನ್ ಅಶ್ರಫ್‌ನ ವಧೆಯ ಬಗ್ಗೆ ಪ್ರಸ್ತಾಪಿಸಿದ್ದೇನೆ. (ಖುತ್‌ಬ ಜುಮುಅ 07–12–2018, ಅಲ್‌ಫಝ್ಲ್ ಇಂಟರ್‌ನ್ಯಾಶ್ನಲ್ 28–12–2018 ಮತ್ತು ಖುತ್‌ಬ ಜುಮುಅ 07–02–2020, ಅಲ್‌ಫಝ್ಲ್ ಇಂಡರ್ ನ್ಯಾಶನಲ್ 20–02–2020). ಆದರೂ ಅದರಲ್ಲಿ ಸಅದ್ ಬಿನ್ ಮುಅಝ್(ರ) ರವರ ಬಗ್ಗೆ ಇರುವ ಸ್ವಲ್ಪ ಭಾಗವನ್ನು ಇಲ್ಲಿ ವಿವರಿಸುವೆನು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನಕ್ಕೆ ಹಿಜ್‌ರತ್ ಮಾಡಿ ಆಗಮಿಸಿದಾಗ ಕಅಬ್ ಬಿನ್ ಅಶ್ರಫ್ ಇತರ ಯಹೂದಿಯರೊಂದಿಗೆ ಸೇರಿ ಗೂಢಾಲೋಚನೆ ನಡೆಸುತ್ತಿದ್ದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಯಹೂದಿಯರ ಮಧ್ಯೆ ಪರಸ್ಪರ ಸ್ನೇಹ, ಶಾಂತಿ, ಸಂರಕ್ಷಣೆ ಮತ್ತು ಪ್ರತಿರೋಧಕ್ಕೆ ಸಂಬಂಧಿಸಿ ಸಹಭಾಗಿತ್ವದ

ಬಗ್ಗೆ ಲಿಖಿತ ಒಪ್ಪಂದ ಮಾಡಲಾಗಿತ್ತು. ಆದರೆ ಕಅಬನ ಹೃದಯದೊಳಗೆ ದ್ವೇಷ ಮತ್ತು ಹಗೆತನದ ಅಗ್ನಿ ಪ್ರಜ್ವಲಿಸಲು ತೊಡಗಿತ್ತು. ಅವನು ರಹಸ್ಯ ತಂತ್ರಗಳ ಮತ್ತು ರಹಸ್ಯ ಒಕ್ಕೂಟಗಳ ಮೂಲಕ ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರ ವಿರುದ್ಧ ವರ್ತಿಸಲು ಪ್ರಾರಂಭಿಸಿದನು. ಹೀಗೂ ಬರೆಯಲಾಗಿದೆ ಕಅಬ್ ಪ್ರತಿ ವರ್ಷ ಯಹೂದಿ ವಿದ್ವಾಂಸರಿಗೆ ಬಹಳಷ್ಟು ಕಾಣಿಕೆಗಳನ್ನು ನೀಡುತ್ತಿದ್ದನು. ಆತನು ಒಮ್ಮೆ ಆ ವಿದ್ವಾಂಸರಿಗೆ ಅವರ ಧರ್ಮ ಗ್ರಂಥಗಳ ಪ್ರಕಾರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಪ್ರಶ್ನಿಸಿದನು ಹೇಳಿರಿ ನಿಮ್ಮ ಪ್ರಕಾರ ಆತನು ಸತ್ಯವಂತನೋ ಅಥವಾ ಸುಳ್ಳುಗಾರನೋ? ಎಂದು ಅವರು ಹೇಳಿದರು ಬಾಹ್ಯವಾಗಿ ಅರ್ಥವಾಗುವುದೇನೆಂದರೆ ಈತನು ನಮ್ಮ ಬೋಧನೆಗಳ ಪ್ರಕಾರ ನಮ್ಮೊಂದಿಗೆ ವಾಗ್ದಾನ ಮಾಡಿರುವಂತಹ ಆ ಪ್ರವಾದಿಯೇ ಆಗಿರುವನು ಎಂದು ಭಾಸವಾಗುತ್ತದೆ. ಕಅಬ್ ರಸೂಲುಲ್ಲಾಹ್(ಸ) ಹಾಗೂ ಇಸ್ಲಾಮ್‌ನ ದೊಡ್ಡ ವಿರೋಧಿ ಆಗಿದ್ದನು. ಈ ಉತ್ತರವನ್ನು ಆಲಿಸಿದ ನಂತರ ರೊಚ್ಚಿಗೆದ್ದು ಅವರನ್ನು ಕೆಟ್ಟದಾಗಿ ಹೇಳಿ ಅಲ್ಲಿಂದ ಹೊದನು. ಅವರಿಗೆ ನೀಡುವಂತಹ ಕಾಣಿಕೆಗಳನ್ನು ಸಹ ತಡೆದನು. ಈ ಕಾಣಿಕೆಗಳನ್ನು ಮತ್ತು ಅವರಿಗೆ ಬರುವಂತಹ ಆದಾಯವು ಬರಲು ನಿಂತಾಗ ಅವರು ಮತ್ತೊಮ್ಮೆ ಕಅಬ್‌ನ ಬಳಿ ಹೋಗಿ ಹೇಳಿದರು ನಾವು ಮತ್ತೊಮ್ಮೆ ಸಮಾಲೋಚನೆ ನಡೆಸಿದೆವು. ಮೌಲವಿಗಳು ಇಂದು ಹಣವನ್ನು ಬಿಡುವುದಿಲ್ಲ ಅಂತಹ ಪರಿಸ್ಥಿತಿ ಅವರದ್ದು ಆಗಿತ್ತು. ಅವರು ಹೇಳಿದರು ನಾವು ಮತ್ತೊಮ್ಮೆ ಸಮಾಲೋಚನೆ ನಡೆಸಿದೆವು ಆಗ ನಮಗೆ ಅರಿವಾಯಿತು ಮುಹಮ್ಮದ್(ಸ) ಆ ಪ್ರವಾದಿಯಲ್ಲ. ಇದಕ್ಕೆ ಆತನು ಬಹಳ ಸಂತೋಷಗೊಂಡು ಅವರಿಗೆ ನೀಡಬೇಕಾಗಿದ್ದ ಕಾಣಿಕೆಗಳನ್ನು ಮತ್ತೊಮ್ಮೆ ಜಾರಿಗೊಳಿಸಿದನು.

ಯಹೂದಿ ವಿದ್ವಾಂಸರನ್ನು ತನ್ನೊಂದಿಗೆ ಸೇರಿಸಿಕೊಳ್ಳುವುದು ಸಾಧಾರಣವಾದ ವಿಷಯವಾಗಿತ್ತು ಆದರೆ ಅಪಾಯವಾದ ವಿಷಯವೇನೆಂದರೆ ಬದರ್ ಯುದ್ಧದ ನಂತರ ಕಅಬ್ ತನ್ನ ಸಂಪೂರ್ಣ ಪ್ರಯತ್ನವನ್ನು ಇಸ್ಲಾಮಿನ ನಾಶಕ್ಕಾಗಿ ವಿನಿಯೋಗಿಸಲು ನಿರ್ಧರಿಸಿದನು. ಬದರ್ ಯುದ್ಧದಲ್ಲಿ ಗಳಿಸಿದ ಜಯ ಇಸ್ಲಾಮ್ ಧರ್ಮಕ್ಕೆ ತನ್ನ ಊಹೆಗೆ ಅತೀತವಾದ ಶಕ್ತಿಯನ್ನು ನೀಡಿದೆ ಎಂದು ಕಅಬ್‌ನಿಗೆ ದೃಢವಾಗಿ ಮನವರಿಕೆಯಾಯಿತು. ಅವನು ಕೂಡಲೇ ಮಕ್ಕದ ಕಡೆಗೆ ಪ್ರಯಾಣಿಸಿದನು. ಅವನು ಮಕ್ಕದಲ್ಲಿ ತನ್ನ ವಾಕ್ಚಾತುರ್ಯದಿಂದ ಮತ್ತು ಕವಿತೆಗಳನ್ನು ಹಾಡುವ ಮೂಲಕ ಖುರೈಶಿಗಳ ಹೃದಯಗಳಲ್ಲಿ ಉರಿಯುತ್ತಿದ್ದ ಅಗ್ನಿಯನ್ನು ಇನ್ನಷ್ಟು ಪ್ರಜ್ವಲಿಸಿದನು. ಅವರ ಹೃದಯಗಳಲ್ಲಿ ಮುಸ್ಲಿಮರ ರಕ್ತವನ್ನು ಹೀರುವ ನಿವಾರಿಸಲಾಗದ ದಾಹವನ್ನು ಸೃಷ್ಟಿಸಿದನು. ಅವರ ಎದೆಯಲ್ಲಿ ಪ್ರತೀಕಾರ ಮಾಡುವ ಮತ್ತು ಹಗೆತನದ ಭಾವನೆಗಳನ್ನು ತುಂಬಿಸಿದನು. ಕಅಬನ ಉತ್ತೇಜಕ ಮಾತುಗಳಿಂದ ಅವರ ಭಾವನೆಗಳಲ್ಲಿ ಅತ್ಯುನ್ನತ ಮಟ್ಟದ ಮಿಂಚು ಉದ್ಭವಿಸಿತು. ಕಅಬದ ಅಂಗಳಕ್ಕೆ ಕರೆದುಕೊಂಡು ಹೋಗಿ ಕಅಬಕ್ಕೆ ಹೊದಿಸಿದ ಪರದೆಯನ್ನು ಅವರ ಕೈಯಲ್ಲಿ ಕೊಟ್ಟು ಅವರು ಹೀಗೆ ಆಣೆ ಹಾಕಿಸುವಂತೆ ಮಾಡಿದನು: ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರನ್ನು ಲೋಕದಿಂದ ನಾಶಮಾಡುವ ತನಕ ನಾವು ವಿಶ್ರಾಂತಿ ಪಡೆಯಲಾರೆವು ಎಂದು. ಅನಂತರ ಆ ದುಷ್ಟನು ಅರಬ್ ದೇಶದ ಇತರ ಗೋತ್ರಗಳ ಕಡೆಗೆ ಒಂದರ ನಂತರ ಇನ್ನೊಂದರಂತೆ ಹೋದನು. ಅಲ್ಲಿ ಸುತ್ತಾಡಿ ಮುಸ್ಲಿಮರ ವಿರುದ್ಧ ಜನರನ್ನು ಉತ್ತೇಜಿಸಿದನು. ಅನಂತರ ಮದೀನಕ್ಕೆ ಮರಳಿ ಬಂದು ಮುಸ್ಲಿಮ್ ಮಹಿಳೆಯರ ವಿರುದ್ಧ ಅಶ್ಲೀಲ ಹಾಡುಗಳನ್ನು ಹಾಡಿದನು. ಉದ್ರೇಕಿಸುವ ತಶ್‌ಬೀಹ್ ಎಂಬ ಆ ಹಾಡುಗಳಲ್ಲಿ ಮುಸ್ಲಿಮ್ ಮಹಿಳೆಯರನ್ನು ಅತ್ಯಂತ ಕೊಳಕು ಅಶ್ಲೀಲ ರೀತಿಯಲ್ಲಿ ವರ್ಣಿಸಿದನು. ಅವನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದ ಮಹಿಳೆಯರನ್ನು ಸಹ ಅಶ್ಲೀಲ ಹಾಡುಗಳಿಗೆ ಗುರಿಪಡಿಸದೆ ಬಿಡಲಿಲ್ಲ. ದೇಶದಲ್ಲಿ ಆ ಪದ್ಯಗಳ ಬಗ್ಗೆ ಜನರು ಚರ್ಚಿಸುವಂತೆ ಮಾಡಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ವಧಿಸಲು ಸಹ ಅವನು ಗೂಢಾಲೋಚನೆ ಮಾಡಿದ್ದನು. ಒಂದು ಸತ್ಕಾರದ ನೆಪದಲ್ಲಿ ತನ್ನ ಮನೆಗೆ ಕರೆದು ಕೆಲವು ಯುವ ಯಹೂದಿಯರಿಂದ ಅವರನ್ನು ಹತ್ಯೆ ಮಾಡಿಸಲು ನಿರ್ಧರಿಸಿದ್ದನು. ಆದರೆ ಅಲ್ಲಾಹನ ಅನುಗ್ರಹದಿಂದ ತಕ್ಕ ಸಮಯದಲ್ಲಿ ಅದರ ಬಗ್ಗೆ ಸಮಾಚಾರ ಲಭಿಸಿದ ಕಾರಣ ಅವನ ಗೂಢತಂತ್ರ ಫಲಕಾರಿಯಾಗಲಿಲ್ಲ. ಕಅಬನ ವಿರುದ್ಧ ಪ್ರತಿಜ್ಞಾ ಭಂಗ, ವಿದ್ರೋಹ, ಯುದ್ಧ ಮಾಡಲು ಪ್ರೋತ್ಸಾಹ, ಹಿಂಸಾಚಾರ, ಅಶ್ಲೀಲ ಹೇಳಿಕೆ, ಕೊಲೆ ಯತ್ನ ಮೊದಲಾದ ದೋಷಾರೋಪಗಳು ಸಾಬೀತಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅಬ್ ಬಿನ್ ಅಶ್ರಫನು ಅವನ ಕುಕೃತ್ಯಗಳ ಕಾರಣದಿಂದ ವಧಾರ್ಹನೆಂದು ವಿಧಿಸಿದರು. ಕಅಬನ ಕುಕೃತ್ಯಗಳ ಕಾರಣ ಮದೀನದಲ್ಲಿ ಎಂತಹ ಪರಿಸ್ಥಿತಿ ತಲೆದೋರಿತ್ತೆಂದರೆ ಅವನ ವಿರುದ್ಧ ಬಹಿರಂಗವಾಗಿ ವಧಾರ್ಹನೆಂದು ಪ್ರಕಟಿಸಿ ಅವನನ್ನು ವಧಿಸಿದರೆ ಮದೀನದಲ್ಲಿ ಅಪಾಯಕರವಾದ ಅಂತಃಕಲಹ ಪ್ರಾರಂಭವಾಗುವ ಭಯವಿದ್ದಿತು. ಆ ಅಂತಃಕಲಹದಲ್ಲಿ ಬಹಳ ರಕ್ತಪಾತವಾಗುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೋಮುಗಳ ಮಧ್ಯೆ ರಕ್ತಪಾತವಾಗುವುದನ್ನು ತಡೆಯಲು ಪ್ರತಿಯೊಂದು ರೀತಿಯಲ್ಲಿ ಪ್ರಯತ್ನಿಸಲು ಬಯಸಿದ್ದರು. ಆದುದರಿಂದ ಕಅಬನನ್ನು ಬಹಿರಂಗವಾಗಿ ಕೊಲ್ಲಬಾರದು ಎಂದು ಅವರು ಮಾರ್ಗದರ್ಶನ ನೀಡಿದರು. ಕೆಲವು ಜನರೊಂದಿಗೆ ರಹಸ್ಯವಾಗಿ ಅವನನ್ನು ಹತ್ಯೆ ಮಾಡಲು ನಿರ್ದೇಶಿಸಿದರು. ಔಸ್ ಗೋತ್ರದ ನಿಷ್ಠಾವಂತ ಸಹಾಬಿ ಮುಹಮ್ಮದ್ ಬಿನ್ ಮುಸ್ಲಿಮನಿಗೆ ಈ ಕೆಲಸ ವಹಿಸಿಕೊಟ್ಟರು. ಹತ್ಯೆಯ ರೀತಿಯ ಬಗ್ಗೆ ಔಸ್ ಗೋತ್ರದ ನಾಯಕ ಸಅದ್ ಬಿನ್ ಮುಆಝರಿಂದ ಸಲಹೆ ಪಡೆಯಲು ಹೇಳಿದರು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ಯಾ ರಸೂಲುಲ್ಲಾಹ್, ರಹಸ್ಯವಾಗಿ ಹತ್ಯೆ ಮಾಡಲು ಏನಾದರೂ ಉಪಾಯ ಮಾಡಿ ಅವನನ್ನು ಮನೆಯಿಂದ ಹೊರಗೆ ಬರುವಂತೆ ಮಾಡಬೇಕಾಗುತ್ತದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೆ ಒಪ್ಪಿಗೆ ನೀಡಿದರು. ಹಾಗೆ ಹಝ್ರತ್ ಸಅದ್ ಬಿನ್ ಮುಆಝರಿಂದ ಸಲಹೆ ಪಡೆದು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರು ತನ್ನೊಂದಿಗೆ ಅಬೂ ನಾಯಿಲ ಮತ್ತು ಇತರ ಎರಡು ಮೂರು ಸಹಾಬರನ್ನು ಕರೆದುಕೊಂಡು ಕಅಬನ ವಧಾರ್ಹ ಶಿಕ್ಷೆಯನ್ನು ನೀಡಿದರು. ಆತನನ್ನು ವಧಿಸಿದ ಬಗ್ಗೆ ವಿವರಾತ್ಮಕವಾಗಿ ಮುಂಚೆಯೇ ಕೆಲವು ಸಹಾಬರವರ ಪ್ರಸ್ತಾವನೆಯಲ್ಲಿ ವಿವರಿಸಿದ್ದೇನೆ. (ಖುತ್‌ಬ ಜುಮುಅ 07-12-2018, ಅಲ್‌ಫಝುಲ್ ಇಂಟರ್‌ನ್ಯಾಶ್ನಲ್ 28-12-2018 ಮತ್ತು ಖುತ್‌ಬ ಜುಮುಅ 07-02-2020, ಅಲ್‌ಫಝುಲ್ ಇಂಟರ್ ನ್ಯಾಶನಲ್ 20-02-2020)

ಏನೇ ಇರಲಿ ಕಅಬ್‌ನನ್ನು ವಧಿಸಲು ಉಪಾಯಗಳನ್ನು ಮಾಡಲಾಯಿತು. ರಾತ್ರಿ ಹೊತ್ತು ಮನೆಯಿಂದ ಹೊರಟ ಆತನನ್ನು ವಧಿಸಲಾಯಿತು. ಕಅಬನು ಹತ್ಯೆ ಮಾಡಲ್ಪಟ್ಟನೆಂಬ ಸಮಾಚಾರ ಬಹಿರಂಗವಾದಾಗ ನಗರದಲ್ಲಿ ಆತಂಕದ ಪರಿಸ್ಥಿತಿ ತಲೆದೋರಿತು. ಯಹೂದಿಯರು ಬಹಳ ಉದ್ವೇಗಭರಿತರಾದರು. ಬೆಳಗ್ಗೆ ಯಹೂದಿಯರ ಒಂದು ಪ್ರತಿನಿಧಿ ಸಂಘ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ತಮ್ಮ ನಾಯಕ ಕಅಬನನ್ನು ಹತ್ಯೆ ಮಾಡಲಾಗಿದೆ ಎಂದು ದೂರು ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ಮಾತುಗಳನ್ನು ಆಲಿಸಿದ ನಂತರ ಕಅಬ್‌ನ ಅಪರಾಧಗಳನ್ನು ಒಂದೊಂದಾಗಿ ವಿವರಿಸಿ ಅವರಿಗೆ ಹೇಳಿದರು. ಕಅಬನು ಮಾಡಿದ ಒಪ್ಪಂದದ ಉಲ್ಲಂಘನೆ, ಪಿತೂರಿ, ಅಶ್ಲೀಲ ಮಾತುಗಳ ಪ್ರಚಾರ, ವಧಿಸಲು ಗೂಢಾಲೋಚನೆ ಮಾಡಿದುದು ಮೊದಲಾದುವುಗಳನ್ನು ಸಂಕ್ಷಿಪ್ತವಾಗಿ ಅವರಿಗೆ ನೆನಪಿಸಿಕೊಟ್ಟರು. ಆಗ ಆ ಯಹೂದಿಯರು ಹೆದರಿಕೊಂಡು ಮೌನವನ್ನು ಅವಲಂಬಿಸಿದರು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇನ್ನು ಮುಂದೆಯಾದರೂ ನೀವು ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಿರಿ. ಹಗೆತನ ಮತ್ತು ಪಿತೂರಿಯ ಬೀಜ ಬಿತ್ತಬೇಡಿರಿ ಎಂದು ಹೇಳಿದರು. ಹಾಗೆ ಯಹೂದಿಯರ ಒಪ್ಪಿಗೆ ಪಡೆದು ಮುಂದಿನ ಕಾಲಕ್ಕೆ ಅನ್ವಯಿಸುವ ಒಂದು ಹೊಸ ಒಪ್ಪಂದ ಪತ್ರ ಬರೆಯಲಾಯಿತು. ಯಹೂದಿಯರು ಮುಸ್ಲಿಮರೊಂದಿಗೆ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸುವ ಬಗ್ಗೆ ಮತ್ತು ಪಿತೂರಿಯ ವಿಧಾನಗಳನ್ನು ತ್ಯಜಿಸುವ ಬಗ್ಗೆ ಹೊಸದಾಗಿ ವಾಗ್ದಾನ ಮಾಡಿದರು. ಕಅಬನು ಅಪರಾಧಿಯಾಗಿರದಿದ್ದರೆ ಯಹೂದಿಯರು ಇಷ್ಟು ಸುಲಭವಾಗಿ ಹೊಸ ಒಪ್ಪಂದ ಮಾಡುತ್ತಿರಲಿಲ್ಲ. ಅವನ ಹತ್ಯೆಯ ಬಗ್ಗೆ ಮೌನವಾಗಿರುತ್ತಿರಲೂ ಇಲ್ಲ. ಅವರ ಹೃದಯಗಳು ಕಅಬನು ಶಿಕ್ಷೆಗೆ ಅರ್ಹನಾಗಿದ್ದನೆಂದು ಮನವರಿಕೆ ಮಾಡಿತ್ತು. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ-467-471)

ಕಅಬ್‌ನಿಗೆ ನೀಡಲಾದ ಶಿಕ್ಷೆ ಇದಾಗಿತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅದನ್ನು ನಾವು ಮಾಡಲಿಲ್ಲ ಎಂದು ನಿರಾಕರಿಸಲಿಲ್ಲ ಬದಲಿಗೆ ಆತನ ಎಲ್ಲಾ ಕುಕೃತ್ಯಗಳನ್ನು ತಿಳಿಸಿದರು ಹೀಗೆ ಇದು ರಸೂಲುಲ್ಲಾಹ್(ಸ) ರವರ ನಿರ್ಧಾರ ಎಂದು ವ್ಯಕ್ತವಾಗುತಿತ್ತು. ರಸೂಲುಲ್ಲಾಹ್(ಸ) ರವರು ಸರಕಾರದ ಮೇಲಧಿಕಾರಿಯು ಆಗಿದ್ದರು ಅದೇ ರೀತಿ ಇದರಲ್ಲಿ ಅನ್ಯ ಗೋತ್ರಗಳ ಮುಖಂಡರಾದ ಸಅದ್ ಬಿನ್ ಮುಆಝ್(ರ) ರವರ ಸಲಹೆಗಳು ಸಹ ಶಾಮಿಲಾಗಿದ್ದವು.

ಯಹೂದಿ ಗೋತ್ರವಾದ ಬನೂ ನಝೀರ್ ಒಂದು ದೊಡ್ಡ ಕಲ್ಲನ್ನು ಕೆಡವಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮೋಸದಿಂದ ನಾಶ ಮಾಡಲು ವ್ಯವಸ್ಥೆ ಮಾಡಿದ್ದರು. ಅಲ್ಲಾಹನು ತನ್ನ ಸಂದೇಶವಾಣಿ ಮೂಲಕ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ವಿಷಯ ತಿಳಿಸಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಗೋತ್ರದ ಸುತ್ತುಮುತ್ತಲೂ ಮುತ್ತಿಗೆ ಹಾಕಲು ಆಜ್ಞಾಪಿಸಿದರು. 4 ಹಿಜರಿ ರಬೀಉಲ್ ಅವ್ವಲ್‌ನಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸ್ವಂತ ರಕ್ಷಣೆಗಾಗಿ ಬನೂ ನಝೀರ್ ಗೋತ್ರದ ವಿರುದ್ಧ ಮುತ್ತಿಗೆ

ಹಾಕಬೇಕಾಯಿತು ಇದರ ಪರಿಣಾಮವಾಗಿ ಕೊನೆಗೆ ಈ ಯಹೂದಿ ಗೋತ್ರವನ್ನು ಮದೀನದಿಂದ ಗಡಿಪಾರು ಮಾಡಲಾಯಿತು. ಬನೂ ನಝೀರ್ ಗೋತ್ರದ ವಿರುದ್ಧದ ಯುದ್ಧದಲ್ಲಿ ಸಂಪತ್ತು ಲಭಿಸಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ಹಝ್ರತ್ ಸಾಬಿತ್ ಬಿನ್ ಖೈಸ್(ರ) ರವರಿಗೆ ಕರೆಸಿ ಹೇಳಿದರು ನನ್ನ ಬಳಿ ನಿಮ್ಮ ಖೌಮಿನವರನ್ನು ಕರೆಸಿರಿ ಎಂದರು. ಹಝ್ರತ್ ಸಾಬಿತ್(ರ) ಹೇಳಿದರು ಯಾ ರಸೂಲಲ್ಲಾಹ್!! ಖಝ್ರಜ್‌ರವರಿಗೆ ಕರೆಯುವುದೇ? ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು ಯಾವುದೇ ಗೋತ್ರಕ್ಕೆ ಸೇರಿದ ಎಲ್ಲಾ ಅನ್ಸಾರ್‌ಗಳನ್ನು ಕರೆಸಿರಿ ಎಂದರು. ಹೀಗೆ ಔಸ್ ಮತ್ತು ಖಝ್ರಜ್ ಗೋತ್ರದ ಜನರನ್ನು ತನ್ನ ಬಳಿಗೆ ಕರೆದರು. ಹಮ್ದ್ ಮತ್ತು ಸನಾ ಪಠಿಸಿದ ನಂತರ ಅನ್‌ಸಾರ್‌ಗಳು, ಮಹಾಜಿರ್‌ಗಳಿಗೆ ನೀಡಿದ ನೆರವುಗಳ ಬಗ್ಗೆ ಪ್ರಸ್ತಾಪಿಸಿದರು. ಅನಂತರ ಹೇಳಿದರು: ನೀವು ಇಚ್ಛಿಸುವುದಾದರೆ ಬನೂ ನಝೀರರಿಂದ ಲಭಿಸಿದ ಸಂಪತ್ತನ್ನು ನಿಮ್ಮ ಮತ್ತು ಮುಹಾಜಿರ್‌ಗಳ ಮಧ್ಯೆ ಹಂಚುವೆನು. ಆಗ ಮುಹಾಜಿರ್‌ಗಳು ನಿಮ್ಮ ಮನೆಗಳಲ್ಲಿ ವಾಸಿಸುವರು. ಅಥವಾ ಇನ್ನೊಂದು ರೀತಿಯಲ್ಲಿ, ಅಂದರೆ ನೀವು ಸಮ್ಮತಿಸುವುದಾದರೆ ಈ ಸಂಪತ್ತನ್ನು ಮುಹಾಜಿರ್‌ನ್‌ಗಳಿಗೆ ಮಾತ್ರ ನೀಡುವೆನು. ಅನಂತರ ಮುಹಾಜಿರ್‌ಗಳು ನಿಮ್ಮ ಮನೆಗಳಿಂದ ಹೊರಗೆ ಹೋಗುವರು ಎಂದು ಹೇಳಿದರು. ಈ ಮಾತುಗಳನ್ನು ಆಲಿಸಿ ಹಝ್ರತ್ ಸಅದ್ ಬಿನ್ ಉಬಾದ ಮತ್ತು ಹಝ್ರತ್ ಸಅದ್ ಬಿನ್ ಮುಆದ್ ನಿವೇದಿಸಿದರು: ಓ ಅಲ್ಲಾಹನ ಸಂದೇಶವಾಹಕರೇ, ತಾವು ಸಂಪತ್ತನ್ನು ಮುಹಾಜಿರ್‌ಗಳಿಗೆ ಹಂಚಿಕೊಡಿರಿ. ಆದರೆ ಅನಂತರ ಅವರು ಹಿಂದಿನ ಹಾಗೆ ನಮ್ಮ ಮನೆಗಳಲ್ಲಿಯೇ ವಾಸಿಸುವರು. ಭ್ರಾತೃ ಬಂಧದ ವ್ಯವಸ್ಥೆ ಮುಂದುವರಿಯುವುದು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಓ ಅಲ್ಲಾಹ್, ಅನ್‌ಸಾರ್‌ಗಳ ಮೇಲೆ ದಯೆದೋರು ಅನ್‌ಸಾರ್‌ಗಳ ಮಕ್ಕಳ ಮೇಲೆಯೂ ದಯೆದೋರು. ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂಪತ್ತನ್ನು ಮುಹಾಜಿರ್‌ಗಳಿಗೆ ಹಂಚಿದರು. ಮತ್ತು ಅನ್ಸಾರ್ಗಳಲ್ಲಿ ಕೇವಲ ಇಬ್ಬರು ಅವಶ್ಯಕತೆ ಇರುವವರಿಗೆ ನೀಡಿದರು. ಅವರಿಬ್ಬರು ಸಹಲ್ ಬಿನ್ ಹುನೈಫ್ ಮತ್ತು ಅಬೂದುಜಾನ ಆಗಿದ್ದರು. ಮತ್ತು ಹಝ್ರತ್ ಸಅದ್ ಬಿನ್ ಮುಆದರಿಗೆ ಅಬೂ ಹಖೀಖ್ ಯಹೂದಿಯ ಖಡ್ಗವನ್ನು ನೀಡಿದರು. ಆ ಖಡ್ಗ ಯಹೂದಿಯರಲ್ಲಿ ಬಹಳ ಪ್ರಸಿದ್ಧವಾಗಿತ್ತು. (ಅಟ್ಲಸ್ ಸೀರತ್ ಖಾತುಮುನ್ನಬೀಯೀನ್, ಪುಟ–264–265, ಸಬ್ಲಿಲ್ ಹುದಾ ವ ರ್‍ರಶ್ಯಾದ್, ಸಂಪುಟ–4, ಪುಟ–325, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಆಯಿಶ(ರ) ವಿರುದ್ಧ ಆರೋಪ ಹೊರಿಸಲ್ಪಟ್ಟಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಹಳ ನೋವನ್ನು ಅನುಭವಿಸಿದರು. ಕಪಟ ವಿಶ್ವಾಸಿಗಳ ಕೆಟ್ಟ ವರ್ತನೆ ಬಗ್ಗೆ ಸಹಾಬರ ಮುಂದೆ ಪ್ರಸ್ತಾಪಿಸಿದಾಗ ಹಝ್ರತ್ ಸಅದ್ ಬಿನ್ ಮುಆದ್ ತನ್ನ ಅಪ್ರತಿಮ ಸಮರ್ಪಣೆಯ ಮನೋಭಾವವನ್ನು ಪ್ರದರ್ಶಿಸಿದ್ದರು. ಈ ಘಟನೆಯನ್ನು ವಿವರಾತ್ಮಕವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು ಪ್ರಸ್ತಾಪಿಸಿದ್ದಾರೆ. ಅದನ್ನು ಹಝ್ರತ್ ಮಸ್ತಹ್‌ರವರ ಜೀವನ ಚರಿತ್ರೆಯ ಪ್ರಸ್ತಾವನೆಯಲ್ಲಿ ನಾನು ವಿವರಿಸಿದ್ದೇನೆ. ಆದರೂ ಹಝ್ರತ್ ಸಅದ್ ಬಿನ್ ಮುಆಝ್(ರ) ರವರಿಗೆ ಸಂಬಂಧಿಸಿದ ಭಾಗವನ್ನು ಇಲ್ಲಿ ಪ್ರಸ್ತಾಪಿಸುವೆನು. ನಾನು ಹೇಳಿದ ಹಾಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರನ್ನು ಜಮಾಯಿಸಿ ಹೇಳಿದರು: ನನಗೆ ದುಃಖ ನೀಡಿದ ಈ ವ್ಯಕ್ತಿಯಿಂದ ನನ್ನನ್ನು ರಕ್ಷಿಸುವವರು ಯಾರಾದರೂ ಇದ್ದಾರೆಯೇ? ಔಸ್ ಗೋತ್ರದ ಮುಖಂಡರಾದ ಹಝ್ರತ್ ಸಅದ್ ಬಿನ್ ಮುಆದ್ ಎದ್ದು ನಿಂತು ಹೇಳಿದರು: ಆ ವ್ಯಕ್ತಿ ನಮ್ಮ ಗೋತ್ರದವನಾಗಿದ್ದರೆ ನಾವು ಅವನನ್ನು ಕೊಲ್ಲಲು ಸಿದ್ಧರಾಗಿದ್ದೇವೆ. ಅವನು ಖಝ್ರಜ್ ಗೋತ್ರದವನಾಗಿದ್ದರೂ ನಾವು ಅವನನ್ನು ಕೊಲ್ಲಲು ಸಿದ್ಧರಾಗಿದ್ದೇವೆ. (ತಫ್‌ಸೀರೆ ಕಬೀರ್, ಸಂಪುಟ–6, ಪುಟ–268–270)

ಖಂದಕ್ ಯುದ್ಧದ ಸಂದರ್ಭದಲ್ಲಿ ಅಬೂ ಸುಫ್‌ಯಾನನು ಯಹೂದಿ ಗೋತ್ರವಾದ ಬನೂ ಖುರೈಝದ ಮುಖಂಡನಾದ ಕಅಬ್ ಬಿನ್ ಅಸ್‌ವದನಿಗೆ ಪ್ರಲೋಭನೆ ನೀಡಿ ಮತ್ತು ಮುಸ್ಲಿಮರು ನಾಶವಾಗುವರೆಂದು ದೃಢವಾಗಿ ನಂಬುವಂತೆ ಮಾಡಿ ಮುಸ್ಲಿಮರೊಂದಿಗೆ ಯಹೂದಿಯರು ಮಾಡಿದ ಒಪ್ಪಂದವನ್ನು ಪಾಲಿಸದಿರುವಂತೆ ಒಪ್ಪಿಸಿದನು ಮತ್ತು ಮಕ್ಕದ ಅವಿಶ್ವಾಸಿಗಳಿಗೆ ಯಹೂದಿಯರು ನೆರವು ನೀಡುವುದಾಗಿ ಅವನಿಂದ ವಾಗ್ದಾನವನ್ನು ಪಡೆದನು.

ಈ ಘಟನೆಯನ್ನು ವಿವರಿಸುತ್ತಾ ಸೀರತ್ ಖಾತುಮುನ್ನಬೀಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬ್ ಎಂ.ಎ ಬರೆಯುತ್ತಾರೆ:

"ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬನೂ ಖುರೈಝ ಗೋತ್ರದ ಈ ಅಪಾಯಕರ ವಿದ್ರೋಹದ ಬಗ್ಗೆ ತಿಳಿದಾಗ ಅವರು ಮೊದಲು ಎರಡು ಮೂರು ಬಾರಿ ರಹಸ್ಯವಾಗಿ ಝುಬೈರ್ ಬಿನುಲ್ ಉಮೂಮ್(ರ) ರವರನ್ನು ಅಲ್ಲಿನ ಪರಿಸ್ಥಿತಿಯನ್ನು ಅರಿತುಕೊಳ್ಳಲು ಕಳುಹಿಸಿದ್ದರು ತದನಂತರ ಔಸ್ ಮತ್ತು ಖಝ್ರಜ್ ಗೋತ್ರಗಳ ಮುಖಂಡರಾದ ಸಅದ್ ಬಿನ್ ಮುಆಝ್ ಮತ್ತು ಸಅದ್ ಬಿನ್ ಉಬಾದರನ್ನು ಬೇರೆ ಕೆಲವು ಪ್ರಭಾವಶಾಲಿ ಸಹಾಬರೊಂದಿಗೆ ತನ್ನ ಪ್ರತಿನಿಧಿಗಳಾಗಿ ಬನೂ ಖುರೈಝರ ಕಡೆಗೆ ಕಳುಹಿಸಿದರು. ಬನೂ ಖುರೈಝ ಗೋತ್ರದವರು ಮತ್ತು ಅವರ ಮುಖಂಡ ಕಅಬ್ ಬಿನ್ ಅಸ್‌ವದ್ ಒಪ್ಪಂದಕ್ಕೆ ಸಂಬಂಧಿಸಿ ಹೇಳಿದರು: ನೀವು ಹೋಗಿರಿ ಮುಹಮ್ಮದ್ ಮತ್ತು ನಮ್ಮ ಮಧ್ಯೆ ಯಾವ ಒಪ್ಪಂದವೂ ಆಗಿಲ್ಲ. ನಾವು ಯಾವ ಒಪ್ಪಂದವನ್ನೂ ಮಾಡಿಲ್ಲ. ಈ ಮಾತುಗಳನ್ನು ಆಲಿಸಿ ಸಹಾಬರ ಪ್ರತಿನಿಧಿ ಸಂಘದವರು ಅಲ್ಲಿಂದ ಎದ್ದು ಹೋದರು. ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಸಅದ್ ಬಿನ್ ಉಬಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಯೋಗ್ಯ ರೀತಿಯಲ್ಲಿ ಸ್ಥಿತಿಗತಿಗಳನ್ನು ವಿವರಿಸಿದರು." (ಸೀರತ್ ಖಾತಮುನ್ನಬಿಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–584–585)

ಏನೇ ಇರಲಿ ಅಂದಿನ ಸಂದರ್ಭದಲ್ಲಿ ಅವರ ಈ ವರ್ತನೆಯು ಮುಸ್ಲಿಮರಿಗೆ ಭಯ ಮೂಡಿಸುವುದ್ದಾಗಿತ್ತು. ನಾಲ್ಕು ದಿಕ್ಕಿನಿಂದಲೂ ಮಕ್ಕದ ಕುಫ್ಫಾರರು ಮದೀನವನ್ನು ತಮ್ಮ ವಶದಲ್ಲಿ ಇರಿಸಿಕೊಂಡಿದ್ದರು. ಮಕ್ಕದ ಕುಫ್ಫಾರರಿಂದ ಯುದ್ಧದ ಈ ಪರಿಸ್ಥಿತಿಯಲ್ಲಿ ಈ ಗೋತ್ರದ ವಿರುದ್ಧ ಯಾವ ಸಂಚು ಮಾಡಲು ಸಾಧ್ಯವಾಗುತ್ತಿರಲಿಲ್ಲ ಆದರೆ ಖಂದಕ್ ಯುದ್ಧದಿಂದ ಮರಳಿ ಮದೀನ ನಗರ ಪ್ರವೇಶಿಸಿದಾಗ ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಶ್‌ಫ್ ಮೂಲಕ ಬನೂ ಖುರೈಝರ ವಿದ್ರೋಹಕ್ಕೆ ಶಿಕ್ಷೆ ನೀಡುವ ಬಗ್ಗೆ ತಿಳಿಸಿದನು. ಇದಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿಸವಸಲ್ಲಮರು ಬನೂ ಖುರೈಝರವರ ಕೋಟೆಯ ಕಡೆ ಹೊರಟು ಅಲ್ಲಿಯೇ ಅಸರ್ ನಮಾಝ್ ನಿರ್ವಹಿಸಲು ಆದೇಶಿಸಿದರು. ಮತ್ತು ರಸೂಲುಲ್ಲಾಹ್(ರ) ರವರು ಹಝ್ರತ್ ಅಲಿ(ರ) ರವರೊಂದಿಗೆ ಸಹಾಬರವರ ಒಂದು ತಂಡವನ್ನು ಕಳುಹಿಸಿದರು. ಬನೂ ಖುರೈಝರ ವಿರುದ್ಧದ ಈ ಯುದ್ಧದ ವಿವರಣೆ ಸ್ವಲ್ಪ ದೀರ್ಘವಾಗಿದೆ. ಹಝ್ರತ್ ಸಅದ್ ಬಿನ್ ಮುಆಝರವರು ಕೊನೆಗೆ ಈ ಬಗ್ಗೆ ತೀರ್ಮಾನಿಸುವುದರಲ್ಲಿ ಪಾತ್ರವಹಿಸಿದ್ದರು. ಈಗ ಸಮಯವಿಲ್ಲದುದರಿಂದ ಇನ್‌ಶಾ ಅಲ್ಲಾಹ್ ಮುಂದೆ ವಿವರಿಸುವೆನು.

***************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮೃತ್ಯು ಹೊಂದಿಯೂ ಕೆಲಸಕ್ಕೆ ಬಾರದಿದ್ದರೆ, ಆದರೆ ಸಾತ್ವಿಕ ಪುರುಷನ ಪ್ರಭಾವ ಅವನ ಸಂತಾನದ ಮೇಲೆಯೂ ಬೀಳುತ್ತದೆ. ಅವು ಸಹ ಅದರಿಂದ ಲಾಭಾನ್ವಿತರಾಗುತ್ತಾರೆ. ವಾಸ್ತವವೇನೆಂದರೆ ಅದು ಅ ಅವನ ಮರಣವಲ್ಲ, ಮರಣದ ನಂತರವೂ ಅವನಗೆ ಹೊಸ ಜೀವನ ನೀಡಲಾಗುತ್ತದೆ. ಹಝ್ರತ್ ದಾವೂದ್(ಅ) ಹೇಳಿದರು: ನಾನು ಮಗುವಾಗಿದ್ದೆ, ವೃದ್ಧನಾದೆನು, ನಾನು ಯಾವ ದೇವ ಭಕ್ತನು ದುಸ್ಥಿತಿಯಲ್ಲಿ ಕಾಣಲಿಲ್ಲ. ಅವರ ಸಂತಾನವನ್ನು ಸಹ ಬಿಕ್ಷುಕನ ತರಹ ಬೇಡುವುದನ್ನು ಕಾಣಲಿಲ್ಲ. ಅಂದರೆ ಅಲ್ಲಾಹನು ಭಯ ಭಕ್ತಿಯುಳ್ಳವರ ಸಂತಾನದ ಸಹ ಸಂರಕ್ಷಕನಾಗಿರುತ್ತಾನೆ. ಹದೀಸಿನಲ್ಲಿ ಬರುತ್ತದೆ ದುಷ್ಕರ್ಮಿಯು ತನ್ನ ಪತ್ನಿ ಸಂತಾನದ ಮೇಲೂ ದೌರ್ಜನ್ಯ ಮಾಡುವವನಾಗುತ್ತಾನೆ. ಏಕೆಂದರೆ ಅವನ ದುಷ್ಪರಿಣಾಮ ಅವರ ಮೇಲಾಗುತ್ತದೆ. **(ಮಲ್ಫೂಝಾತ್, ಸಂಪುಟ–1, ಪುಟ–167 ರಿಂದ 170, ಮುದ್ರಣ 2018 ಖಾದಿಯಾನ್)**

**ಮಹೋನ್ನತನಾದ ದೇವ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

***(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)***

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮಾಡಿದ್ದು ಹೌದೆಂದಾಯಿತು! ಎಸ್.ಪಿ ಸಾಹೇಬರು ಹೇಳುತ್ತಾರೆ – ಈ ಡಕಾಯಿತರು ಸುಳ್ಳು ಹೇಳುತ್ತಿದ್ದಾರೆ. ನಾವು ಅವರಿಂದ ಅಷ್ಟೊಂದು ಹಣವನ್ನು ತೆಗೆದುಕೊಳ್ಳುವುದಿಲ್ಲ. ಅಲ್ಲಿಯ ಪರಿಸ್ಥಿತಿ ಇಲ್ಲಿಯವರೆಗೆ ತಲುಪಿದರೆ ಸುಧಾರಣೆ ಆಗುವುದು ಹೇಗೆ?

ನಾವು ಸುಧಾರಣೆಯ ಬಗ್ಗೆ ಮಾತಾಡುವುದೇನೆಂದರೆ ಅದು ಇಸ್ಲಾಮಿನ ಎರಡು ತತ್ವಗಳ ಮೇಲೆ ಅವಲಂಬಿತವಾಗಿದೆ. ಒಂದು ಅಲ್ಲಾಹನ ಆರಾಧನೆ ಮಾಡುವುದು, ಅದರ ಹಕ್ಕನ್ನು ಪಾಲಿಸುವುದು ಮತ್ತು ಅವನ ದಾಸರ ಹಕ್ಕುಗಳನ್ನು ಪಾಲಿಸುವುದು. ದಾಸರ ಹಕ್ಕುಗಳನ್ನು ಪಾಲಿಸಿದಾಗ ಅದುವೇ ಸುಧಾರಣೆ ಎಂದಾಗುವುದು. ಹುಝೂರ್[ಅಬಿಅ] ಹೇಳಿದರು. ನಾನು ಈ ಮೊದಲೇ ಹೇಳಿದ್ದೇನೆ. ಇಲ್ಲಿಯ ಒಬ್ಬರು ಪ್ರೊಫೆಸರ್ ಸಾಹೇಬರು ಬಂದಿದ್ದರು. ಅವರಿಗೂ ಹೇಳಿದ್ದೆ. ಒಮ್ಮೆ ಮೇಝ್‌ತುಂಗ್ ಕಾಲದಲ್ಲಿ ಪಾಕಿಸ್ತಾನದ ಸಚಿವರ ಒಂದು ತಂಡ ಚೀನಾ ಪ್ರವಾಸಕ್ಕೆ ಹೊರಟಿತ್ತು. ಅವರು ಕೇಳಿದರು. ನೀವು ತುಂಬ ಪ್ರಗತಿ ಸಾಧಿಸಿದ್ದೀರಿ. ನೀವು ಅಷ್ಟೊಂದು ಸುಧಾರಣೆ ಹೇಗೆ ತಂದಿರಿ. ಆಗ ಚೀನೀಯರು ಉತ್ತರಿಸಿದರು – ನೀವು ನಮಗೆ ಏಕೆ ಕೇಳುತ್ತಿದ್ದೀರಿ? ನಿಮ್ಮ ಪ್ರವಾದಿಗಳ ಗ್ರಂಥವನ್ನು ತೆರೆದು ನೋಡಿ. ಅದರಲ್ಲಿ ಎಲ್ಲವನ್ನೂ ಬರೆಯಲಾಗಿದೆ. ನೀವು ಅದರಂತೆ ನಡೆದುಕೊಂಡರೆ ಎಲ್ಲವೂ ಸರಿ ಹೋದಿತು. ಅಂತೂ ಪವಿತ್ರ ಖುರ್‌ಆನ್ ಸುಧಾರಣೆಯ ಗ್ರಂಥವಾಗಿದೆ. ಧರ್ಮದ ಜೊತೆಯಲ್ಲಿ ಸುಧಾರಣೆಯನ್ನೂ ಪ್ರತಿಪಾದಿಸುತ್ತದೆ.

ವಾಸ್ತವವೇನೆಂದರೆ ನಾವು ನಿಜವಾದ ಮುಸ್ಲಿಮರಾದರೆ ನಮ್ಮ ಸುಧಾರಣೆಯೂ ಆಗುವುದು. ಇತರರನ್ನು ಸುಧಾರಿಸಲೂ ಅರ್ಹರಾಗುವೆವು. ಎರಡು ದಿನಗಳ ಹಿಂದಿನ ಲೇಖನವೊಂದರಲ್ಲಿ ನಿಮ್ಮ ಹಲವು ಸಂಸತ್ ಸದಸ್ಯರು ಮತ್ತು ಇತರ ಬಂಧುಗಳು ಎಷ್ಟೋ ಮಾತುಗಳನ್ನು ಹೇಳಿದ್ದರು. ನಾನು ಅವರ ಮಾತುಗಳಿಗೆ ಖುರ್‌ಆನ್ ಮೂಲಕ ಉತ್ತರ ಕೊಟ್ಟೆ. ಆಗ ದೊರೆತ ಅನಿಸಿಕೆಗಳೆಂದರೆ, ಇದು ಎಲ್ಲರೂ ಅನುಸರಿಸಲು ಯೋಗ್ಯವಾದ ಶಿಕ್ಷಣವಾಗಿದೆ. ಆದುದರಿಂದ ಇದೇ ಸುಧಾರಣೆಯಾಗಿದೆ. ಇದನ್ನೇ ನಾವು ಮಾಡಬೇಕಾಗಿದೆ. ಇಸ್ಲಾಮ್ ಬಯಸುವ ಸುಧಾರಣೆಯೂ ಇದೇ ಆಗಿದೆ.

**ಪತ್ರಕರ್ತನು ಪುನಃ ಪ್ರಶ್ನೆ ಮಾಡಿದನು. ಮುಸ್ಲಿಮರಲ್ಲಿ ಅಹ್ಮದಿಯಾ ಜಮಾಅತ್ ಮಾತ್ರವೇ ಹೇಳುತ್ತದೆ ಯಾರ ನಿರೀಕ್ಷೆಯಿತ್ತೋ ಅವರು ಬಂದಾಗಿದೆ ಎಂದು.**

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಎಲ್ಲರೂ ಅದನ್ನು ಒಪ್ಪಿಕೊಳ್ಳುವುದಾದರೆ ಹಝ್ರತ್ ರಸೂಲುಲ್ಲಾಹ್[ಸ] ಹೀಗೇಕೆ ಹೇಳುತ್ತಿದ್ದರು – ಒಂದೇ ಪಂಗಡ ನಾಜಿ (ಮುಕ್ತಿ ಪಡೆಯುವುದು) ಬೇರೆ ಎಲ್ಲ ಪಂಗಡಗಳು ನರಕವಾಸಿಗಳಾಗುವರು. ಈ ಭವಿಷ್ಯವಾಣಿ ಪೂರ್ಣಗೊಳ್ಳಬೇಕಾಗಿತ್ತು. ಯಾರು ಬರಬೇಕಾಗಿತ್ತೋ ಅವರು ಬಂದಾಗಿದೆ ಎಂಬುದು ಇಸ್ಲಾಮಿನ ನಿಜವಾದ ಶಿಕ್ಷಣವಾಗಿದೆ. ಅಂತಹವರೇ ಅಹ್ಮದಿಗಳಾಗುತ್ತಿದ್ದಾರೆ. ಲಂಡನ್ನಿನ LBC ರೇಡಿಯೋ ಇದೆ. ಅದಕ್ಕೆ ಸುಪ್ರಸಿದ್ಧ ಪತ್ರಕರ್ತರೊಬ್ಬರು ನನ್ನ ಸಂದರ್ಶನ ಪಡೆದಿದ್ದರು. ಬಹುಶ: ನೀವು ಕೇಳಿರಬಹುದು. ಅವರಿಗೆ ನಾನು ಇದನ್ನೇ ಹೇಳಿದ್ದೆ. ನೀವು ಇಲ್ಲಿಂದ ಹತ್ತು ಇಪ್ಪತ್ತು ವ್ಯಕ್ತಿಗಳು ISIS ಗೆ ಸೇರಿದರೆ ಅದರ ಎಷ್ಟು ಪ್ರಚಾರ ಮಾಡುತ್ತೀರಿ?. ಪತ್ರಿಕೆಗಳಲ್ಲಿ ಜಾಹಿರಾತು ಹಾಕುತ್ತೀರಿ. ಆದರೆ ಲಕ್ಷೋಪಲಕ್ಷ ಜನರು ತಮ್ಮ ಸುಧಾರಣೆಗಾಗಿ ಈ ಶಾಂತಿ ಪ್ರಿಯ ಜಮಾಅತ್ತಿನಲ್ಲಿ ಪ್ರತಿ ವರ್ಷ ಸೇರುತ್ತಾರೆ. ಪತ್ರಿಕೆಗಳಲ್ಲಿ ನಾವು ಯಾವ ಪ್ರಚಾರವನ್ನೂ ಮಾಡುವುದಿಲ್ಲ. ನಾವು ನ್ಯಾಯಪ್ರಿಯರಾಗಿದ್ದೇವೆ ಎಂದು ನೀವು ಹೇಳುತ್ತೀರಿ. ನಮ್ಮ ಜಲ್ಸ ಬರುತ್ತಿದೆ. ಅದರಲ್ಲಿ ಬೈಅತ್‌ಮಾಡುವ ಘೋಷಣೆ ಆಗುತ್ತದೆ. ನಿಮ್ಮ ರೇಡಿಯೋದಲ್ಲಿ ಆ ಸುದ್ದಿ ಬಿತ್ತರಿಸಬೇಕು. ಆಗ ನಾನು ತಿಳಿಯುವೆನು, ನೀವು ಎಷ್ಟು ನ್ಯಾಯಪ್ರಿಯರಾಗಿದ್ದೀರಿ ಎಂದು.

ಭವಿಷ್ಯವಾಣಿ ಪ್ರಕಾರ ಇದು ಆಗಲೇಬೇಕಿತ್ತು. ನಿಮ್ಮ ಹೆತ್ತವರು, ತಾತ, ಮುತ್ತಾತ ಅವರು ಸಹ ಅ ಕಾಲದಲ್ಲಿ ಯಾವುದೇ ಕಾರಣದಿಂದ ಅಹ್ಮದಿಯತ್ ಸೇರಿದ್ದರು. ಒಂದು ನಿಮಿಷದಲ್ಲಿ ಹೀಗಾಗಬೇಕೆಂದರೆ ಆಗುವುದಿಲ್ಲ. ಕೆಲವೊಮ್ಮೆ ಪ್ರಚಾರದ ಮೂಲಕ ಮತ್ತು ಕೆಲವೊಮ್ಮೆ ದೃಷ್ಟಾಂತಗಳ ಮೂಲಕ ಜನರು ಸೇರುತ್ತಾರೆ. ಹಝ್ರತ್ ಮಸೀಹ್ ಮೌಊದ್[ಅ] ಭವಿಷ್ಯ ನುಡಿದಿದ್ದರು: ಪ್ಲೇಗ್ ಹರಡುವುದು, ಭೂಕಂಪಗಳು ಸಂಭವಿಸುವವು ಎಂದು. ಆ ಕಾಲದಲ್ಲಿ ಗುಂಪು ಗುಂಪಾಗಿ ಜನರು ಜಮಾಅತ್ತಿಗೆ ಸೇರಿದರು. ಪ್ಲೇಗ್ ನಂತರ ದಿನಾಲೂ ನಾಲ್ಕು ನೂರು, ಐದು ನೂರರ ತನಕ ಬೈಅತ್‌ಗಳು ಆಗುತ್ತಿದ್ದವು. ಆ ಕಾರಣದಿಂದ ಜನರು ಸೇರುತ್ತಿದ್ದರು. ಈಗಲೂ ಎಲ್ಲೆಲ್ಲಿ ದೃಷ್ಟಾಂತಗಳು ಕಾಣುತ್ತವೆಯೋ ಅಲ್ಲಿ ಜಮಾಅತಿಗೆ ಬಂದು ಸೇರುತ್ತಾರೆ. ಆಫ್ರಿಕಾದಿಂದ ವರದಿಗಳು ಬರುತ್ತಿವೆ. ಕೆಲವೊಮ್ಮೆ ನಾನು ಆ ಬಗ್ಗೆ ವಿವರ ನೀಡಿರುತ್ತೇನೆ. ಊರಿಗೆ ಊರೇ ಅಹ್ಮದಿಯತಿಗೆ ಸೇರುತ್ತಾರೆ. ಎರಡೆರಡು ನೂರು, ನಾಲ್ಕು ನಾಲ್ಕು ನೂರು ಮನೆಗಳ ಜನರು ಅಹ್ಮದಿಗಳಾಗುತ್ತಾರೆ. ಎರಡು–ನಾಲ್ಕು ನೂರು ಮನೆಗಳೆಂದರೆ ಸಾವಿರ ಸಾವಿರದ ಇನ್ನೂರು ಜನರೆನ್ನಬಹುದು. ಕೆಲವೊಮ್ಮೆ ಸಣ್ಣ ಸಣ್ಣ ವಸತಿಗಳು, ಸಣ್ಣ ಊರುಗಳು, ಪಟ್ಟಣಗಳು ಎಲ್ಲರೂ ಒಟ್ಟಾಗಿ ಅಹ್ಮದಿಗಳಾಗುತ್ತಾರೆ. ಇದು ಒಂದೇ ದಿನದಲ್ಲಿ ಆಗುವಂತಹ ಕೆಲಸವಂತೂ ಅಲ್ಲ. ಇಸ್ಲಾಮ್ ಸಹ ಒಂದೇ ದಿನದಲ್ಲಿ ಹರಡಿರಲಿಲ್ಲ.

**ಪತ್ರಕರ್ತನು ಪ್ರಶ್ನಿಸಿದನು. ವಿಜಯದ ಭವಿಷ್ಯವಾಣಿ ಪ್ರಕಾರ ನೀವು ಏನು ಭಾವಿಸುತ್ತೀರಿ ಅದು ಪ್ರಚಾರದ ಮೂಲಕ ಆಗುವುದೋ ಅಥವಾ ನೈಸರ್ಗಿಕ ವಿನಾಶ ಅಥವಾ ಯುದ್ಧದ ಮೂಲಕ ಆಗುವುದೋ?**

ಈ ಪ್ರಶ್ನೆಯ ಉತ್ತರವಾಗಿ ಹುಝೂರ್[ಅಬಿಅ] ಹೇಳಿದರು. ಪ್ರಚಾರ ಮಾಡುವುದು ನಮ್ಮ ಕರ್ತವ್ಯವಾಗಿದೆ. ಹಝ್ರತ್ ರಸೂಲುಲ್ಲಾಹ್[ಸ] ಅವರಿಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಅದೇ ಆಜ್ಞೆ ನೀಡಿರುತ್ತಾನೆ. ಅದರ ಪ್ರಚಾರ ಅನಿವಾರ್ಯವಾಗಿದೆ. ಪ್ರಚಾಂದ ನಂತರ ಇತರರು ಹಿಂಸೆಗೆ ಇಳಿದರೆ ದೃಷ್ಟಾಂತಗಳು ಕಾಣಸಿಗುತ್ತವೆ. ವಿರೋಧಿಗಳು ಅದನ್ನು ಒಪ್ಪುತ್ತಾರೆ. ಈ ಹಿಂದೆ ಪಾಕಿಸ್ತಾನದಲ್ಲಿ ಚಂಡಮಾರುತ ಬಂದಾಗ ಅಹ್ಮದಿಯೇತರ ಮೌಲ್ವಿಗಳು ಸ್ವಯಂ ಹೇಳತೊಡಗಿದ್ದರು. ಇದು ಅಲ್ಲಾಹನ ಶಿಕ್ಷೆಯಾಗಿದೆ, ನಮ್ಮ ಮೇಲೆ ಬಂದೆರಗಿದೆ. ಇದರ ಬಗ್ಗೆ ನಾವು ಯೋಚಿಸಬೇಕಾಗಿದೆ, ನಾವು ಏನು ತಪ್ಪು ಮಾಡಿದ್ದೇವೆ ಎಂದು. ಆದರೆ ಅದರ ಜೊತೆಯಲ್ಲಿಯೇ ಅವರು ಹೇಳಿಬಿಟ್ಟರು: ಖಾದಿಯಾನಿಗಳ ಮಾತನ್ನು ನಂಬಬಾರದು ಎಂದು. ಮಾತನ್ನು ನಂಬದಿದ್ದರೆ ಮತ್ತೆ ಶಿಕ್ಷೆ ಅನಿವಾರ್ಯವಾಗಿರುತ್ತದೆ.

ಅಲ್ಲಾಹನು ಎಲ್ಲದಕ್ಕೂ ಒಂದು ಸಮಯ ನಿಶ್ಚಯಿಸಿರುತ್ತಾನೆ. ಪ್ರಚಾರ ಮಾಡುವುದು ನಮ್ಮ ಕರ್ತವ್ಯವಾಗಿದೆ, ದುಆ ಮಾಡುವುದು ನಮ್ಮ ಕರ್ತವ್ಯವಾಗಿದೆ, ಆ ಮೂಲಕವೇ ವಿಜಯ ದೊರಕುವುದು. ಅವರು ನಂಬದಿದ್ದರೆ ಕೆಲವು ಕಡೆ ಶಿಕ್ಷೆಗೆ ಗುರಿಯಾಗುತ್ತಾರೆ ಮತ್ತು ಆ ಶಿಕ್ಷೆ ಅವರ ಗಮನ ಸೆಳೆಯುತ್ತದೆ. ಆದುದರಿಂದ ನಾನು ಜಮಾಅತಿನ ಹುಡುಗರಿಗೆ ಹೇಳುತ್ತೇನೆ. ನಮ್ಮ ಕೆಲಸ ಪ್ರಚಾರ ಮಾಡುವುದಾಗಿದೆ, ಜನರಿಗೆ ಮನವರಿಕೆ ಮಾಡಬೇಕಾಗಿದೆ. ಇದು ಸನ್ಮಾರ್ಗವಾಗಿದೆ ಎಂದು, ಈ ಕಡೆ ಬಾರದಿದ್ದರೆ ಶಿಕ್ಷೆಗಳು ಸಂಭವಿಸಬಹುದು.

**ಪತ್ರಕರ್ತನು ಪ್ರಶ್ನೆ ಕೇಳಿದನು. ಒಬಾಮಾ ಅವರು State of union ನಲ್ಲಿ ಒಂದು ಭಾಷಣದ ನಡುವೆ ಹೇಳಿದ್ದರು. No challenge is a greater threat than to our Future generation than climate change ಈ ಕುರಿತು ನಿಮ್ಮ ಅಭಿಪ್ರಾಯವೇನು?**

ಈ ಪ್ರಶ್ನೆಯ ಉತ್ತರವಾಗಿ ಹುಝೂರ್(ಅತಬಿಅ)ರವರು ಹೀಗೆ ಹೇಳಿದರು.

ಇದಾದ ನಂತರ ಓರ್ವ ರಾಜಕೀಯ ವ್ಯಕ್ತಿ ಮತ್ತು ಒಬ್ಬ ಸೆನೆಟರ್ ಇನ್ನೊಂದು ಹೇಳಿಕೆ ನೀಡಿದ್ದನು. ಈ ಮಾತು ಸರಿಯಲ್ಲ ಎಂದು. Climate Change ಅನ್ನು ಹಿಡಿದು ಕುಳಿತುಕೊಂಡಿದ್ದೀರಿ. ಈ ಸಮಯದಲ್ಲಿ ಅದಕ್ಕಿಂತ ದೊಡ್ಡ ಸಮಸ್ಯೆ ನೀವು ಒಬ್ಬರು ಇನ್ನೊಬ್ಬರ ಮೇಲೆ ಮಾಡುತ್ತಿರುವ ದೌರ್ಜನ್ಯಗಳಾಗಿವೆ. Climate Change ಕುರಿತು ವಿಜ್ಞಾನಿಗಳ ತಜ್ಞರ ಅಭಿಪ್ರಾಯವು ಕೆಲ ವರ್ಷಗಳ ನಂತರ ಹಲವು Decades ನಂತಹ ಒಂದು ಬದಲಾವಣೆ ಆಗುತ್ತದೆ. North Pole ಮತ್ತು ಅದೇ ರೀತಿಯ ಕ್ಷೇತ್ರಗಳಲ್ಲಿ ಹಿಮಗಟ್ಟಿದ್ದು. ಅದು ಹಿಂದೆಯೂ ಹಾಗೆ ಆಗಿತ್ತು. ಅದು ಕರಗಿ ಹೋಗಿತ್ತು. ಮತ್ತೆ ಹಿಮಗಟ್ಟಿಯಾಯಿತು. ಇದು Climate Change ಆಗಿದೆ. ಆದರೆ ಇದರ ಹಿಂದೆ ಅಮೇರಿಕದ ಉದ್ದೇಶವೇನು. ಅವರ ಹೇಳಿಕೆಗಳನ್ನು ಅಷ್ಟಕ್ಕೆ ಸೀಮಿತ ಮಾಡಿ ನೋಡಬಾರದು. ಯೋಚಿಸಿ ನೋಡಬೇಕು. ಅದಕ್ಕೆ ಒಂದು ಕಾರಣ ನೀಡುವುದೇನೆಂದರೆ ಕಾರ್ಬನ್ ಎಮಿಷನ್‌ಯಿಂದಾಗಿ ಹಲವು ಬದಲಾವಣೆಗಳಾಗುತ್ತಿವೆ. ಉಷ್ಣಾಂಶ ಹೆಚ್ಚಾಗುತ್ತಿದೆ. ಅದರಿಂದ Ozone layer ನಲ್ಲಿ ದೂರ ಉಂಟಾಗಿದೆ ಅಥವಾ ಒಡಕುಂಟಾಗಿದೆ. ಇಂತಹದೊಂದು ದೀರ್ಘ ಕಥೆ ಹೇಳಲಾಗುತ್ತದೆ. ಆದುದರಿಂದ ನಮಗೆ ಯೋಚಿಸಿ ಕೆಲಸ ಮಾಡಬೇಕಾಗಿದೆ. ಅಮೇರಿಕಾವು ಹೇಳುತ್ತದೆ. ನಾವು ಅದನ್ನು ಕಡಿಮೆಗೊಳಿಸುತ್ತೇವೆ ಎಂದು, ಚೀನಾ ಹೇಳುವುದು ಅದು ನಿಮ್ಮ ಚತುರತೆ ಎಂದು ಭಾವಿಸುತ್ತೇವೆ. ನೀವು ತುಂಬ ಪ್ರಗತಿ ಸಾಧಿಸಿದ್ದೀರಿ. ನಮಗಿಂತ ನೂರು ವರ್ಷಗಳ ಹಿಂದೆ ಇವೆಲ್ಲ ವಸ್ತುಗಳನ್ನು ಗಾಳಿಯಲ್ಲಿ ಬಿಟ್ಟಿದ್ದರು. ನಾವು ಎಲ್ಲಿಯವರೆಗೆ ಈ ನೂರು ವರ್ಷಗಳ ಸಾಧನೆ ಮಾಡಿ ತೋರಿಸುವುದಿಲ್ಲವೋ, ನಿಮ್ಮನ್ನು ಹಿಂದಕ್ಕೆ ತಳ್ಳುವುದಿಲ್ಲವೋ ಸುಮ್ಮನೆ ಇರಲಾರೆವು. ಈಗ ನಿಮ್ಮಿಂದ ತಪ್ಪಾಗಿದೆ. ನೂರು ವರ್ಷಗಳ ನಂತರ ನಮ್ಮ ತಪ್ಪಾಗುವುದು, ವಾಸ್ತವದಲ್ಲಿ ಲೋಕವು ಪ್ರಗತಿಯ ಹೆಸರಿನಲ್ಲಿ ಒಬ್ಬರು ಮತ್ತೊಬ್ಬರನ್ನು ಸೋಲಿಸುವ ಗುರಿ ಹೊಂದಿದ್ದಾರೆ. ಆದುದರಿಂದ Climate Change ಬಗ್ಗೆ ಹಾಹಾಕಾರ ಹಾಕುತ್ತಿದ್ದಾರೆ. ಪ್ರಶ್ನೆ ಉದ್ಭವವಾಗುವುದೇನಂದರೆ ಏನು ಈ ವಾತಾವರದಲ್ಲಿ ಉಂಡಾಗುತ್ತಿರುವ ಪರಿವರ್ತನೆಗಳಿಂದ ಇಂದ ಇತರ ದೇಶಗಳು

ಅಸ್ತಿತ್ವಕ್ಕೆ ಬಂದಿವೆ. ಮೊದಲು ನಮ್ಮ ಕ್ಷೇತ್ರಗಳನ್ನು ನೋಡಿಕೊಳ್ಳಿ. ಅಲ್ಲಿ ಏನು ಕೆಲಸ ನಡೆಯುತ್ತಿಲ್ಲ.

**ಪತ್ರಕರ್ತನು ಕೇಳಿದನು. ನಿಮ್ಮ ಅಭಿಪ್ರಾಯದಲ್ಲಿ ಅತ್ಯಂತ ದೊಡ್ಡ ಅಪಾಯವು ಮೂರನೆಯ ಮಹಾಯುದ್ಧವಾಗಿದೆ?**

ಈ ಪ್ರಶ್ನೆಗೆ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ನಾನು ನೋಡುವ ಅತ್ಯಂತ ದೊಡ್ಡ ಅಪಾಯ (ನಾನು ಲೌಕಿಕ ಮುಖಂಡನಲ್ಲ) ಅಲ್ಲಾಹನಿಂದ ದೂರವಾಗಿದ್ದು ಆಗಿದೆ. ಅಲ್ಲಾಹನು ಸಂದೇಶವಾಹಕರಿಗೆ, ಅವರು ನಂಬದಿದ್ದಾಗ ಶಿಕ್ಷೆ ಕೊಡುತ್ತಾನೆ. ಅಲ್ಲಾಹನು ದೌರ್ಜನ್ಯಗಳು ಹೆಚ್ಚಾದಾಗ ಶಿಕ್ಷೆ ಕೊಡುತ್ತಾನೆ. ಲೋಕದಲ್ಲಿ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಇಸ್ಲಾಮ್ ನಶಿಸುತ್ತಿದೆ. ಮುಸಲ್ಮಾನರನ್ನು ಹತ್ಯೆ ಮಾಡಲಾಗುತ್ತಿದೆ. ನೀವು ಸ್ವಯಂ ಈಗ ಹೇಳಿದ್ದೀರಿ. ಅಭಿವೃದ್ಧಿಶೀಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳನ್ನು ಪ್ರಗತಿ ಹೊಂದಲು ಬಿಡುತ್ತಿಲ್ಲ. ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳಿಗೆ ಏನಾದರೊಂದು Restrictions ಹಾಕುವ ಯೋಚನೆ ಮಾಡುತ್ತಿದೆ. Climate Change ಪ್ರಶ್ನೆ ತೆಗೆದುಕೊಳ್ಳುತ್ತಾರೆ. ಆ ಕುರಿತು ಸಭೆಗಳಾದವು. ಪ್ರಶ್ನೆಯಿರುವುದು, Climate Change ಸಮಸ್ಯೆ ಹಿಂದಿನ ಎರಡು ದಶಕಗಳಿಂದ ನಡೆಯುತ್ತಿದೆ. ಆದರೆ ಎಷ್ಟು ಜನರು ತೀರಿ ಹೋದರು. ಆ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ.

ಜನರು ಈಗ ಹೇಳತೊಡಗಿದ್ದಾರೆ. (ಈ ಸುದ್ದಿ ಸರಿಯೋ ತಪ್ಪೋ ತಿಳಿಯುತ್ತಿಲ್ಲ) ಹಲವು ರೀತಿಯ ರೋಗಗಳು ಹರಡಲು ತಾವೇ Virus ಗಳನ್ನು ಸೃಷ್ಟಿಸುತ್ತಾರೆ ಮತ್ತು ಅದನ್ನು ಪರಿಹರಿಸಲು ತಮ್ಮ ಕಾರ್ಖಾನೆಗಳಲ್ಲಿ ಅದರ ಔಷಧಿಗಳನ್ನು ತಯಾರಿಸುತ್ತಾರೆ. ಒಮ್ಮೆ Mad cow ಸಮಸ್ಯೆ ಉದ್ಭವವಾದರೆ ಮತ್ತೊಮ್ಮೆ Birdflu ಸಮಸ್ಯೆ ಹುಟ್ಟುತ್ತದೆ. ಆಫ್ರಿಕಾದಲ್ಲಿ ಎಬೋಲ ಸಮಸ್ಯೆ ಹುಟ್ಟಿತ್ತು.

ಒಟ್ಟಿನಲ್ಲಿ ಮನುಷ್ಯನು ತನ್ನ ಹದ್ದುಗಳನ್ನು ಮೀರಿದರೆ ಆಗ ಅಲ್ಲಾಹನು ತನ್ನ ಶಕ್ತಿಗಳನ್ನು ಪ್ರಯೋಗಿಸುತ್ತಾನೆ. ಈಗ ನೋಡಿರಿ. ಮೊದಲು ಜನಸಂಖ್ಯೆಗಿಂತಲೂ ಅರಣ್ಯಗಳು ಹೆಚ್ಚಾಗಿದ್ದವು. ಜನರು ವಿನಾಕಾರಣ ಅಲ್ಲಾಹನ ಮಿತಿಗಳನ್ನು ಮೀರಿದರೆ ಅದರ ನೈಸರ್ಗಿಕ ದುಷ್ಪರಿಣಾಮವನ್ನು ಸಹಜವಾಗಿ ಅನುಭವಿಸಬೇಕಾಗುತ್ತದೆ. ಪಾಕಿಸ್ತಾನದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಪಾಕಿಸ್ತಾನದ ಉತ್ತರ ಕ್ಷೇತ್ರದಿಂದ ಇಲ್ಲದಿದ್ದರೆ ರಾವಲ್ಪಿಂಡಿಯಿಂದ ಮೇಲೆ ಹೋದರೆ ಎಲ್ಲ ಕ್ಷೇತ್ರವು ಒಂದು ಕಾಲದಲ್ಲಿ ಹಸಿರುಪಟ್ಟಿಗೆ ಸೇರಿತ್ತು. ಅಲ್ಲಿ ದಟ್ಟವಾದ ಅರಣ್ಯಗಳಿದ್ದವು. ಅದೇ ರೀತಿ ಸವಾತ್ ಪ್ರದೇಶದಲ್ಲಿ, ಕಾಶ್ಮೀರ ಪ್ರದೇಶದಲ್ಲಿ, ಮುಂದೆ ನೀಲಂವೇಲಿ ಇತ್ಯಾದಿ ಕ್ಷೇತ್ರಗಳಲ್ಲಿ ಇನ್ನೂ ಕೆಲವು ಸ್ಥಳಗಳಲ್ಲಿ ಅರಣ್ಯಗಳಿದ್ದವು. ಅದನ್ನು ಜನರು ಮತ್ತು ರಾಜಕಾರಣಿಗಳು ಕಡಿದು ಕಡಿದು, ಕಾಡುಗಳನ್ನು ಮಾರಿ ಪ್ರಯೋಜನ ಪಡೆದಿದ್ದಾರೆ. ಆದರೆ ಹೊಸ Plantation ಏನೂ ಮಾಡಲಿಲ್ಲ Plantation ಆಗುವವರೆಗೆ ಆದ ನಷ್ಟ ಭರಿಸಲು ಸಾಧ್ಯವಾಗುವುದಿಲ್ಲ.

**ಪತ್ರಕರ್ತನು ಪ್ರಶ್ನೆ ಕೇಳಿದನು. ನೀವು ಜಗತ್ತಿನ ನೇತಾರರಿಗೆ ಪತ್ರಗಳನ್ನು ಬರೆದಿದ್ದೀರಿ. ಗ್ರಂಥವನ್ನೂ ಪ್ರಕಟಿಸಿದ್ದೀರಿ. ಆದರೂ ಲೋಕ ಶಾಂತಿಯ ಕಡೆ ವಾಲುತ್ತಿಲ್ಲ. ಅದರಿಂದ ನಿಮಗೆ ನಿರಾಶೆ ಉಂಟಾಗುವುದಿಲ್ಲವೇ?**

ಈ ಪ್ರಶ್ನೆಯ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಮುಬಾರಕಾ ಬೇಗಂ ಸಾಹಿಬಾ ಒಂದು ಒಳ್ಳೆಯ ಕವನ ಬರೆದಿರುತ್ತಾರೆ. ಮಾಯೂಸ್ ಗ್ಹಮ್‌ಝುದ ಕೋಯಿ ಉಸ್ ಕೆ ಸಬಾ ನಹೀ ಖಬ್‌ಝು ಮೇ ಜಿಸ್ಕೆ ಖಬ್‌ಝು ಸೈಫೆ ಖುದಾ ನಹೀ. ಅಲ್ಲಾಹನ ಮೇಲೆ ದೃಢ ವಿಶ್ವಾಸವಿದ್ದವರು ನಿರಾಶರಾಗುವುದಿಲ್ಲ. ಐರ್ಲ್ಯಾಂಡಿನಲ್ಲೂ ಒಬ್ಬ ಪತ್ರಕರ್ತರು ಇದೇ ಪ್ರಶ್ನೆಯನ್ನು ಕೇಳಿದ್ದರು. ನಾನು ಹೇಳಿದೆ. ನಾವು ಬಿಟ್ಟುಕೊಡುವವರಲ್ಲ. ನಾವು ನಿರಂತರವಾಗಿ ಪ್ರಯತ್ನ ಮಾಡುತ್ತಲೇ ಇರುತ್ತೇವೆ. ಒಂದು ದಿನ ಬರುವುದು ಲೋಕವು Realise ಮಾಡುವುದು ಮತ್ತು ಸರಿಯಾಗುವುದು, ಪ್ರಗತಿ ಬಯಸುವ ಸಮುದಾಯಗಳ ಗುಣ ಅದೇ ಆಗಿರುತ್ತದೆ. ಒಂದು ವೇಳೆ ಸೋಲನ್ನೊಪ್ಪಿಕೊಂಡು ಕುಳಿತುಕೊಂಡರೆ ಅಂತ್ಯಗೊಳ್ಳುತ್ತೇವೆ. ನಾನು ನಿರಾಶನಾದರೆ ನನಗಿಂತ ಹೆಚ್ಚಾಗಿ ನಿರಾಶರಾಗುವಿರಿ. ಪತ್ರಗಳ ವಿಷಯದಲ್ಲಿ ಹೇಳುವುದಾದರೆ ಓಬಾಮ ಸಾಹಿಬರ ಓರ್ವ Political Advisor ಸ್ವಯಂ ನನ್ನೊಡನೆ ಭೇಟಿ ಮಾಡಿ ಹೇಳಿದ. “ನಾನು ಈ ವಿಷಯದಲ್ಲಿ ಮಾತನಾಡುವೆ, ನನಗೆ ಆಶ್ಚರ್ಯವಾಯಿತು. ಇಲ್ಲಿಯವರೆಗೆ ಉತ್ತರ ಬರಲಿಲ್ಲ. ಕೆಲ ಸಮಯದ ನಂತರ ಉತ್ತರ ಬಂತು. ಅನಂತರ ಮತ್ತೆ ಉತ್ತರ ಬಂತು, ನಮ್ಮ ಪ್ರಮುಖರು ಸಮಾಲೋಚಿಸಿದರು ಮತ್ತು ಹೇಳಿದರು. ಈ ಪತ್ರದ ಉತ್ತರ ನೀಡುವುದು ತುಂಬ ಕಷ್ಟವಿದೆ. ಆದುದರಿಂದ ಉತ್ತರ ಕೊಡಬಾರದು.

ಕೆನಡಾದ ಪ್ರಧಾನಮಂತ್ರಿಗಳು ಮೊದಲು ನನಗೆ ಸಣ್ಣ ಉತ್ತರ ನೀಡಿದರು. ಅವರ ಸಹಾಯಕರೊಬ್ಬರು ನನ್ನನ್ನು ಆಕಸ್ಮಿಕವಾಗಿ ಭೇಟಿಯಾದರು. ಅವರೊಂದಿಗೆ ಮಾತುಕತೆ ನಡೆಯಿತು. ಸ್ವಲ್ಪ ದಿನಗಳ ನಂತರ ಅದಕ್ಕಿಂತ ಸ್ವಲ್ಪ ಒಳ್ಳೆಯ ಉತ್ತರ ಬಂತು. ನಾವು ಈ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು. ಕೇವಲ ಡೇವಿಡ್ ಕೆಮ್ಯೂನ್ ಮಾತ್ರ ನನಗೆ ಸರಿಯಾದ ಉತ್ತರ ನೀಡಿದ್ದರು. ಅವರು ನನಗೆ ಬರೆದರು. ನಾವು Atomic power ಕಡಿತಗೊಳಿಸಲು ಪ್ರಯತ್ನ ಮಾಡುತ್ತಿದ್ದೇವೆ. ನಾವೆಲ್ಲ G8 ದೇಶದವರಾಗಿದ್ದೇವೆ. ಈಗ G7 ಉಳಿಯಿತು. ಅವರೂ ಕಡಿತಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ರಷ್ಯಾವನ್ನು ಹೊರತುಪಡಿಸಲಾಗಿದೆ. 2020 ರವರೆಗೆ ನಮಗೆ ಭರವಸೆಯಿದೆ. ನಾವು ನಮ್ಮ ಅಣುಶಕ್ತಿಯನ್ನು ಕಡಿಮೆ ಮಾಡುತ್ತ ಮೂರನೇ ಒಂದು ಭಾಗಕ್ಕೆ ಬರಬಹುದಾಗಿದೆ. ಅದೇ ರೀತಿ ಉಳಿದ ಲೋಕವು ಕಡಿತಗೊಳಿಸಬಹುದು.

ಹುಝೂರ್(ಅಬಿಅ) ಹೇಳಿದರು. ಈ ಭರವಸೆಯ ನಡುವೆಯೂ ಕೆಲವು ದೇಶಗಳು ಅಣ್ವಸ್ತ್ರಗಳನ್ನು ವೃದ್ಧಿಸಿಕೊಳ್ಳುತ್ತಿವೆ. ಇಸ್ರಾಯಿಲರ ಪ್ರಧಾನಮಂತ್ರಿಯವರಿಗೆ ನಾನು ಒಂದು ಪತ್ರ ಬರೆದಿದ್ದೆ. ಆದರೆ ಪರಿಣಾಮವೇನಾಯಿತು? ಅವರು ಎರಡು ದಿನಗಳ ಹಿಂದೆ Threat ಮಾಡಿದರು ಮತ್ತು ಹೇಳಿದರು. ಅಮೇರಿಕಾ ಜಪಾನಿನ ಮೇಲೆ ಅಣುಬಾಂಬ್ ಹಾಕಿತ್ತು. ಅದರ ಸಮರ್ಥನೆ ಹೀಗೆ ಮಾಡಿದರು. ಹೀಗೆ ನಾವು ಮಾಡದಿರುತ್ತಿದ್ದರೆ ಅದರಿಂದ ಲಕ್ಷೋಪಲಕ್ಷ ಜನರು ಜೀವ ಕಳೆದುಕೊಳ್ಳುತ್ತಿದ್ದರು. ಯುದ್ಧ ಇನ್ನೂ ದೀರ್ಘವಾಗುತ್ತಿತ್ತು. ಮತ್ತು ಹೆಚ್ಚು ಜನರು ಸಾಯುತ್ತಿದ್ದರು. ಆದುದರಿಂದ ನಾವು ಸಹ ಯುದ್ಧವನ್ನು ತಡೆಯಲು ಇರಾನಿನ ಮೇಲೆ ಅಣುಬಾಂಬ್ ಹಾಕಿದರೆ ಅದರ ಸಮರ್ಥನೆಗೆ ಬೇಕಾದ ಕಾರಣ ನಮ್ಮಲ್ಲಿದೆ. ಹಿಂದೆಯೇ ಇದನ್ನೂ ಹೇಳಿದ್ದರು. ಆದರೆ ನಾವು ಹಾಕಲಾರೆವು. ಅಂತೂ ಅವರು ಆ ಪ್ರಶ್ನೆಯನ್ನಾದರೂ ಎತ್ತಿದ್ದಾರಲ್ಲ. ಇರಾನನ್ನು ಎಚ್ಚರಿಸಿದ್ದಾರೆ. ಇರಾನ್ ಅಣುಶಕ್ತಿ ಹೊಂದಿದವರಾದರೆ ಈ ಸಮರ್ಥನೆಯ ನಂತರ ತಡೆದುಕೊಳ್ಳಲು ಸಾಧ್ಯವಾಗಬಹುದು. ಎಲ್ಲ ಬೃಹತ್ ಶಕ್ತಿಗಳು ಇರಾನ್ ವಿರುದ್ಧ ಒಂದಾಗಬೇಕು. ನಾನು ಒಬ್ಬ ಹುಚ್ಚನ ಉದಾಹರಣೆ ನೀಡುತ್ತಿದ್ದೇನೆ. ರಬ್ವಾದಲ್ಲಿ ಒಬ್ಬ ಹುಚ್ಚನಿದ್ದ. ಅವನು ಜನರ ವಿರುದ್ಧ ಹೇಳುತ್ತಿದ್ದನು – ಈ ಶಕ್ತಿಯುಳ್ಳ ಜನರು ನನ್ನನ್ನು ಬೀಳಿಸುತ್ತಾರೆ ಮತ್ತು ಹೊಡೆಯುತ್ತಾರೆ, ಹೊಡೆದು ಹೊಡೆದು ನೆಲಕ್ಕೆ ಉರುಳಿಸುತ್ತಾರೆ ಮತ್ತು ನನ್ನ ಕುತ್ತಿಗೆ ಹಿಚುಕುತ್ತಾರೆ. ನನ್ನ ಕಣ್ಣು ಹೊರಗೆ ಬಂದಾಗ, ನನ್ನ ಶ್ವಾಸ ನಿಂತು ಹೋದಾಗ, ಕೇಳುತ್ತಾರೆ. ಪಿಶಾಚಿ ಕಣ್ಣು ತೋರಿಸುತ್ತಿದ್ದಾನೆ. ಅವನನ್ನು ಇನ್ನೂ ಹೊಡೆಯಿರಿ ಎಂದು. ಅವರ ಅವಸ್ಥೆ ಹೀಗಿದೆ. ಅವರು ಮೊದಲು ಹೊಡೆಯುತ್ತಾರೆ, ಮತ್ತೆ ಹೇಳುತ್ತಾರೆ ಅವನು ಕಣ್ಣು ತೋರಿಸುತ್ತಿದ್ದಾನೆ. ಇನ್ನೂ ಹೊಡೆಯಿರಿ. ಇವೆಲ್ಲವೂ ದಜ್ಜಾಲೀ ತಂತ್ರಗಳಾಗಿವೆ.

**ಪತ್ರಕರ್ತನು ಪ್ರಶ್ನೆ ಮಾಡಿದನು. ಲೋಕದಲ್ಲಿ ಇದೀಗ ಎರಡು ಬ್ಲಾಕ್‌ಗಳಿವೆ. ಈ ಬ್ಲಾಕ್‌ಗಳ ನೇತಾರರಾದ ಅಂದರೆ ಓಬಾಮ ಮತ್ತು ಪುಟಿನ್ ನಿಮ್ಮನ್ನು ಭೇಟಿ ಮಾಡಬಯಸಿದರೆ ನೀವು ಏನು ಹೇಳುವಿರಿ?**

ಈ ಪ್ರಶ್ನೆಗೆ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ನೀವು ಮೊದಲು ಸಂದರ್ಭವಾದರೂ ಒದಗಿಸಿ ಕೊಡಿ. ಮತ್ತು ನೋಡಿರಿ ನಾನು ಏನು ಹೇಳುತ್ತೇನೆ ಎಂದು.

**ಪತ್ರಕರ್ತರು ಹೇಳಿದರು. ಇದೀಗ ಕೊನೆಯ ಪ್ರಶ್ನೆ ಏನೆಂದರೆ ಜರ್ಮನಿಗೋಸ್ಕರ ನಿಮ್ಮ ಸಂದೇಶವೇನು?**

ಹುಝೂರ್ ಹೇಳೀದರು. ಜರ್ಮನಿಯು ತುಂಬ ಔದಾರ್ಯದಿಂದ ಯೂರೋಪಿಯನರನ್ನು ಉಳಿಸಿಕೊಂಡಿದೆ. ಅದನ್ನು ಉಳಿಸಿಕೊಂಡರೆ ರಕ್ಷಿಸಲ್ಪಡುವಿರಿ. ಅದಾಗ್ಯೂ ನಮ್ಮ ಪ್ರಧಾನಮಂತ್ರಿಗಳು ಅದರ ವಿರುದ್ಧ ನಿಲುವು ಪಡೆದಿದ್ದಾರೆ. ಇಲ್ಲಿ ಜರ್ಮನಿಯ ಮೇಲೆಯೇ ಹೆಚ್ಚು ಭಾರ ಬಿದ್ದಿದೆ. ಆದರೂ ನನ್ನ ಭಾವನೆಯಲ್ಲಿ ಯೂರೋಪಿನ ಬಲವರ್ಧನೆ ಖಾಯಂಗೊಳಿಸಲು ಅದು ಅನಿವಾರ್ಯವಾಗಿದೆ. ಈಗ ಜರ್ಮನಿ ಪ್ರತ್ಯೇಕ ದೇಶವಾಗಿರುವ ಪ್ರಶ್ನೆ ಏಳುವುದಿಲ್ಲ. ಬದಲು ಯೂರೋಪಿನ ಭೂಖಂಡದ ದೇಶವಾಗಿ ಪರಿಣಮಿಸಿದೆ. ಅಮೇರಿಕದೊಂದಿಗೆ ಸ್ಪರ್ಧಿಸುತ್ತಿದೆ. ಆರ್ಥಿಕ ನೆಲೆಯಲ್ಲೂ ನೀವು ಕೆಳಗೆ ಹೋಗುತ್ತಿದ್ದೀರಿ. ಡಾಲರ್ ಬಲಗೊಳ್ಳುತ್ತಿದೆ. ಯೂರೋ ಕುಸಿಯುತ್ತಿದೆ. ಆರ್ಥಿಕ ಕೊರತೆಯು ಸದ್ಯಕ್ಕೆ ಎಲ್ಲದಕ್ಕಿಂತ ದೊಡ್ಡ ಆಯುಧವಾಗಿರುತ್ತದೆ. ನಿಮ್ಮ ವಾದವು ಇದಾಗಿದೆ. ನಮ್ಮ Industry ಉತ್ತಮವಾಗಿದೆ ಎಂದು, ನಮ್ಮ ಮಾರ್ಕೆಟ್ ಚೀನದಲ್ಲಿಯೂ ತಲುಪಿದೆ ಇಂಡಿಯಾಕ್ಕೂ ತಲುಪಿದೆ ಏಷ್ಯಾ ಮತ್ತು ಇತರ ಸ್ಥಳಗಳಿಗೂ ತಲುಪಿದೆ. ಈಗ ಆಫ್ರಿಕಕ್ಕೂ ಹೋಗುತ್ತಿದೆ. ಆದರೆ ಒಂದು ಮಿತಿಯೊಳಗೆ ಇದು ಆಗುತ್ತಿದೆ. ಈಗ ಪ್ರಶ್ನೆಯಿರುವುದು ಮುಂದಿನವರ Purchasing Power ಏನಿರಬಹುದು ಎಂಬುದು. ನಿಮ್ಮ Industry ಹೋಗುವ ದೇಶಗಳಲ್ಲಿ Situation Point ಎಲ್ಲಿಯವರೆಗಿದೆ.

ಒಂದು ಕಾಲದಲ್ಲಿ ತೈಲೋತ್ಪಾದನೆ ಮಾಡುವ ಸೌದಿ ಅರೇಬಿಯಾಗಳಂತಹ ದೇಶಗಳು ಹೇಳುತ್ತಿದ್ದವು. ಬಹಳ ಉದ್ದವಾದ ವಾಹನಗಳನ್ನು ಬಳಸುತ್ತಾರೆ. ಕೆಲಸ ಮಾಡಲು ಅಥವಾ ಸೌದೆ ತರಲು ಸೂಪರ್ ಮಾರ್ಕೆಟ್‌ಗೆ ಹೋಗುತ್ತಾರೆ ಅಥವಾ ಬ್ಯಾಂಕಿನಲ್ಲಿ ಕೆಲಸ ಮಾಡಲು

ಹೋಗುತ್ತಾರೆ. ಅರ್ಧ ಅರ್ಧ ಗಂಟೆಯವರೆಗೆ ಪಾರ್ಕಿಂಗ್‌ನಲ್ಲಿ ಕಾರುಗಳನ್ನು ಚಾಲ್ತಿನಲ್ಲಿ ಇಡುತ್ತಿದ್ದರು, ಸೆಕೆಗಾಲದಲ್ಲಿ ಎ.ಸಿ. ಆನ್ ಇಡುತ್ತಿದ್ದರು. ಬಿಸಿಯಾಗಬಾದರೆಂದು ಆದರೆ ಪರಿಸ್ಥಿರಿ ಈಗ ಏನಾಗಿದೆ ಎಂದರೆ ಸಣ್ಣ ವಾಹನಗಳನ್ನು ಇಟ್ಟುಕೊಳ್ಳುತ್ತಿದ್ದಾರೆ ಮತ್ತು ಮೊದಲಿನ ಹಾಗೂ ಬೇಗ ಬೇಗ ಟೈರ್‌ಗಳನ್ನು ಬದಲಾಯಿಸುತ್ತಿಲ್ಲ. ಕೂಡಲೇ ವಾಹನಗಳ ಬಂದ್ ಮಾಡುತ್ತಾರೆ. ಅಲ್ಲದೆ ಇದೀಗ ಈ ಕಾರುಗಳಲ್ಲಿ Autimatic ಸಿಸ್ಟಮ್ ಬಂದು ಬಿಟ್ಟಿದೆ. ಎಲ್ಲಿ ನೀವು Traffic light ಗೋಸ್ಕರ ಬ್ರೇಕ್ ಹಾಕುತ್ತೀರೋ ಅಲ್ಲೇ ಕಾರು ಆಫ್ ಆಗುತ್ತದೆ ಅಂತೂ ಈ ಆರ್ಥಿಕತೆಯ ಕೊರತೆ ಎಲ್ಲದಕ್ಕಿಂತ ದೊಡ್ಡ ಆಯುಧವಾಗುತ್ತದೆ. ಆದುದರಿಂದ ಜರ್ಮನಿ ತಮ್ಮ ಆರ್ಥಿಕತೆಯ ಮೇಲೆ ಹೆಚ್ಚು ಗಮನಕೊಟ್ಟು ಬಲಪಡಿಸಬೇಕಾಗಿದೆ. ಜರ್ಮನಿಯ ಆರ್ಥಿಕತೆಯು ಯೂರೋಪಿನ ಆರ್ಥಿಕತೆಗೆ ಸಂಬಂಧಿಸಿದ್ದಾಗಿದೆ.

**ಪತ್ರಕರ್ತನು ಕೇಳಿದನು. ಜರ್ಮನ್ ಸಮುದಾಯಗಳಿಗೆ ನಿಮ್ಮ ಸಂದೇಶವೇನು**?

ಆಗ ಹುಝೂರ್ ಹೇಳಿದರು ಜರ್ಮನ್ ಸಮುದಾಯಗಳಿಗೆ ಸಂದೇಶವೇನೆಂದರೆ ಸಹಿಷ್ಣುತೆಯ ಗುಣ ಒತ್ತಾಯಕ್ಕಾದರೂ ಸ್ವೀಕರಿಸಲಾಗಿದೆ. ಅಂತೆಯೇ ಅವರು ಸಹಿಷ್ಣುತೆ ಹಾಗೂ ಔದಾರ್ಯವುಳ್ಳವರು. ಯಾವುದೆಲ್ಲ ಸಮುದಾಯಗಳು ಇಲ್ಲಿ ಬಂದು ನೆಲೆಸಿವೆ ಮತ್ತು ಜರ್ಮನ್ ದೇಶದ ಒಂದು ಭಾಗವಾಗಿ ಹೋಗಿವೆ! ಅವರನ್ನೆಲ್ಲಾ ತಮ್ಮದಾಗಿಸಿಕೊಳ್ಳಿ. ಈಗ ಜರ್ಮನರು ಒಂದು ಸಮುದಾಯವಾಗಿ ಉಳಿದಿಲ್ಲ. ಹಿಂದಿನ ಮೂರು ನಾಲ್ಕು ನೂರು ವರ್ಷಗಳ ಇತಿಹಾಸ ನೊಡಿದರೆ ಅವರಲ್ಲಿಯೂ ವಿವಿಧ ಸಮುದಾಯಗಳು ಶಾಮೀಲಾಗಿದ್ದುದು ತಿಳಿದು ಬರುತ್ತದೆ. ಆದುದರಿಂದ ಔದಾರ್ಯ ತೋರಿಸಿ ಮತ್ತು ವಲಸೆ ಬಂದವರೊಂದಿಗೆ ತಮ್ಮವರಂತೆ ವರ್ತಿಸಿರಿ. ವಲಸೆ ಬಂದವರು ಹಲವು ಲಕ್ಷ ತುರ್ಕರು ಅಥವಾ ಏಶಿಯನ್‌ಗಳು ನೆಲೆಸಿದ್ದಾರೆ. ಅವರು ತಮ್ಮನ್ನು ಈ ದೇಶದ ಭಾಗವೆಂದು ಭಾವಿಸಬೇಕು ಮತ್ತು ದೇಶಕ್ಕೆ ನಿಷ್ಠೆ ತೋರಿಸಬೇಕು. ಅ ರೀತಿಯ ನಿಷ್ಠಾವಂತರನ್ನು ಜರ್ಮನ್ನರು ಗೌರಿವಿಸಲೂ ಬೇಕು.

**ಕುಟುಂಬಗಳ ಭೇಟಿ**

ಸಂದರ್ಶನದ ಈ ಕಾರ್ಯಕ್ರಮವು 6 ಗಂಟೆ 23 ನಿಮಿಷಕ್ಕೆ ಮುಕ್ತಾಯವಾಯಿತು. ಇಂದಿನ ಸಂಜೆಯ ಅಧಿವೇಶನದಲ್ಲಿ 44 ಕುಟುಂಬಗಳ 187 ಜನರು ಅಲ್ಲದೆ ಇತರ 50 ಜಮಾತ್ ಬಾಂಧವರು ವೈಯಕ್ತಿಕವಾಗಿ ಭೇಟಿ ಮಾಡುವ ಭಾಗ್ಯ ಪಡೆದರು. ಹೀಗೆ ಒಟ್ಟು 237 ಜನರು ಭೇಟಿಯಾದರು.

ಇಂದು ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ 60 ಜಮಾಅತುಗಳಿಂದ ಬಂದವರಾಗಿದ್ದರು. ಇವರಲ್ಲಿ ಕೆಲವರು ತಮ್ಮ ಕುಟುಂಬಗಳೊಂದಿಗೆ ಬಹು ದೀರ್ಘವಾದ ಪ್ರಯಾಣ ಬೆಳೆಸಿ ತಮ್ಮ ಪ್ರೀತಿಯ ಇಮಾಮರನ್ನು ಭೇಟಿಯಾಗಲು ಬಂದು ತಲುಪಿದ್ದರು.

HONNOVER ನಿಂದ ಬರುವವರು 350 ಕಿ.ಮೀ ಮತ್ತು Munchen ನಿಂದ ಬರುವವರು, 395 ಕಿ.ಮೀ ಬರ್ಲಿನ್‌ನಿಂದ ಬರುವವರು 550 ಕಿ.ಮೀ ನಷ್ಟು ದೀರ್ಘವಾದ ಪ್ರಯಾಣ ಬೆಳೆಸಿ ಭೇಟಿ ಮಾಡಲು ಬಂದು ತಲುಪಿದರು.

ಭೇಟಿಯ ಈ ಕಾರ್ಯಕ್ರಮವು 9 ಗಂಟೆಯವರೆಗೆ ನಡೆಯಿತು.

ಅನಂತರ ಹುಝೂರ್ ಮಾನ್ಯ ಅಬ್ದುಲ್ ಖಬೀರ್ ರಿಜ್ವಾನ್ ಸಾಹಿಬ್ ಮುಬಲ್ಲಿಗ್ (ಹಫ್‌ತರ್ ಅಪ್ತ ಕಾರ್ಯದರ್ಶಿ ಲಂಡನ್) ರವರ ವಲೀಮಾ ಔತಣಕೂಟದಲ್ಲಿ ಭಾಗವಹಿಸಿದರು.

ಈ ಸಮಾರಂಭದ ಏರ್ಪಾಡು ಬೈತುಸ್ಸುಬೂಹ್‌ದ ಒಂದು ಸಭಾಂಗಣದಲ್ಲಿ ಮಾಡಲಾಗಿತ್ತು.

ಅನಂತರ ಹುಝೂರ್ ಆಗಮಿಸಿ ಮಗ್ರೀಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**26 ಮೇ, ಮಂಗಳವಾರ, 2015**.

ಹುಝೂರ್(ಅಬಿಅ) ಮುಂಜಾನೆ ನಾಲ್ಕೂವರೆ ಗಂಟೆಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ನಂತರ ಕಚೇರಿಯ ಅಂಚೆಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು. ಪ್ರಪಂಚದ ವಿವಿಧ ದೇಶಗಳಿಂದ ಹಾಗೂ ಲಂಡನ್ ಕೇಂದ್ರದಿಂದ ಸಾಮಾನ್ಯವಾಗಿ ದಿನನಿತ್ಯದ ಅಂಚೆಗಳು, ಫ್ಯಾಕ್ಸ್ ಮತ್ತು ಇಮೇಲ್‌ಗಳು ಬರುತ್ತಿದ್ದವು. ಅವನ್ನೆಲ್ಲ ಪರಿಶೀಲಿಸಿ ನಿರ್ದೇಶನಗಳನ್ನು ನೀಡುತ್ತಿದ್ದರು.

**ಕುಟುಂಬಗಳ ಭೇಟಿ**

ಹನ್ನೊಂದೂವರೆ ಗಂಟೆಗೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿ ಕುಟುಂಬ ಹಾಗೂ ವೈಯಕ್ತಿಕ ಭೇಟಿಯನ್ನು ಪ್ರಾರಂಭಿಸಿದರು.

ಇಂದು ಫ್ರಂಕ್‌ಫರ್ಟ್‌ನ ಜಮಾಅತುಗಳಲ್ಲದೇ CALW, NORD, ACHEN, MENHIEM, FULDA, ULM-DONAU, NEUBERG, GODDELAU, IMMEN HAUSSEN, DRESDEN, ELLWANGEN, HANAU, KOLN, DIEBERG, LANGEN, WEISBADEN, BOCHOLT, NASIRBAGH, LEPZIG, HONNOVER, OSNABRUCK, MUNSTER, AALEN, NORTHEIM, NEUSS, LAHR ಜಮಾಅತುಗಳಿಂದ ಬಂದ ಸಹೋದರರು ಹಾಗೂ ಅವರ ಕುಟುಂಬದವರು ತಮ್ಮ ಪ್ರೀತಿಯ ಇಮಾಮರನ್ನು ಭೇಟಿ ಮಾಡುವ ಭಾಗ್ಯ ಪಡೆದರು.

ಒಟ್ಟು 30 ಕುಟುಂಬಗಳ 99 ಜನರು ಮತ್ತು ವೈಯಕ್ತಿಕವಾಗಿ 38 ಜನರು ಹುಝೂರ್(ಅಬಿಅ) ರೊಡನೆ ಭೇಟಿ ಮಾಡುವ ಭಾಗ್ಯ ಪಡೆದರು.

ಈ ಭೇಟಿ ಮಾಡುವವರಲ್ಲಿ ಪ್ರತಿಯೊಬ್ಬರೂ ತಮ್ಮ ಪ್ರೀತಿಯ ನೇತಾರರೊಡನೆ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಪ್ರೀತಿಯಿಂದ ವಿಧ್ಯಾರ್ಥಿ ಬಾಲಕ, ಬಾಲಕಿಯರಿಗೆ ಲೇಖನಿ (Pen) ನೀಡಿದರು. ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೆಟ್‌ಗಳನ್ನು ನೀಡಿದರು. ಈ ಕಾರ್ಯಕ್ರಮವು ಒಂದು ಗಂಟೆ 15 ನಿಮಿಷದವರೆಗೆ ಜಾರಿಯಲ್ಲಿತ್ತು.

ಅನಂತರ ಮುಕರ್‍ರಮ್ ಆಬಿದ್ ವಹದೀದ್ ಖಾನ್ ಸಾಹಿಬ್ (incharge press Media Office) **ಹುಝೂರ್**(ಅಬಿಅ) ರೊಡನೆ ಕಚೇರಿ ಕೆಲಸಗಳ ನಿಮಿತ್ತ ಭೇಟಿಯಾದರು ಮತ್ತು ನಿರ್ದೇಶನಗಳನ್ನು ಪಡೆದರು.

2 ಗಂಟೆಗೆ **ಹುಝೂರ್**(ಅಬಿಅ) ಝುಹರ್, ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿ ವಿವಿಧ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಂಡರು.

**ಹುಝೂರ್(ಅಬಿಅ) ರೊಂದಿಗೆ ಪ್ರೊಫೇಸರ್‌ಗಳ ಭೇಟಿ**

ಹುಝೂರ್(ಅಬಿಅ) ಪ್ರೊಫೇಸರ್‌ಗಳ ಭೇಟಿಗಾಗಿ 6 ಗಂಟೆಗೆ ಕಚೇರಿಗೆ ಆಗಮಿಸಿ ಕಾರ್ಯಕ್ರಮ ಪ್ರಾರಂಭಿಸಿದರು. ಜರ್ಮನಿಯ ವಿವಿಧ ವಿಶ್ವವಿದ್ಯಾನಿಲಯಗಳ ಕೆಳಗೆ ನಮೂದಿತ ಹತ್ತು ಪ್ರೋಫೆಸರ್‌ರವರು ಭೇಟಿ ಮಾಡಲು ಆಗಮಿಸಿದ್ದರು.

Pro ಸೋಝೂನೆ Schroter ಸಾಹಿಬಾ Ethnology ವಿಭಾಗದ ನಿರ್ದೇಶಕರಾಗಿರುವರು ಮತ್ತು ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದಲ್ಲಿ ಇಸ್ಲಾಮ್ ವಿಭಾಗದ ಮುಖಂಡರಾಗಿರುವವರು.

ಪ್ರೋಫೆಸರ್ ಜಮಾಲ್ ಮಲಿಕ್ ಸಾಹಿಬ್ ಅವರು Air fort ವಿಶ್ವವಿದ್ಯಾನಿಲಯದಲ್ಲಿ ಇಸ್ಲಾಮಿಯತ್‌ನ ಪ್ರೋಫೆಸರ್ ಆಗಿರುವರು. ಅವರು ಪಾಕಿಸ್ತಾನ ಮೂಲದವರಾಗಿರುತ್ತಾರೆ.

ಪ್ರೋಫೆಸರ್ Fuss ಸಾಹಿಬ್ ಅವರು ಮಾರ್‌ಬರ್ಗ್ ಯೂನಿವರ್ಸಿಟಿಯಲ್ಲಿ ಇಸ್ಲಾಮಿಕ್ ಪ್ರೋಫೆಸರ್ ಆಗಿರುವರು.

ಪ್ರೋಫೆಸರ್ ಜಮಾಲ್ ಮಲಿಕ್ ಸಾಹಿಬ್ ಅವರು Air fort ವಿಶ್ವವಿದ್ಯಾನಿಲಯದಲ್ಲಿ ಇಸ್ಲಾಮಿಯತ್‌ನ ಪ್ರೋಫೆಸರ್ ಆಗಿರುವರು. ಅವರು ಪಾಕಿಸ್ತಾನ ಮೂಲದವರಾಗಿರುತ್ತಾರೆ.

ಪ್ರೋಫೆಸರ್ Fuss ಸಾಹಿಬ್ ಅವರು ಮಾರ್‌ಬರ್ಗ್ ಯೂನಿವರ್ಸಿಟಿಯಲ್ಲಿ ಇಸ್ಲಾಮಿಕ್ ಪ್ರೋಫೆಸರ್ ಆಗಿರುವರು.

ಓಅವರ್ Bertrand ಇವರು ಪ್ರೋಫೆಸರ್ Schroter ಸಾಹೇಬರ ವಿಭಾಗದಲ್ಲಿ ಸಂಶೋಧಕರಾಗಿ ಕಾರ್ಯನಿರತರಾಗಿರುವರು.

ಡಾ॥ ಮುಹಮ್ಮದ್ ವಲ್ದಾನ್ ಸಾಹಿಬ್ ಅವರು ಇಂಡೋನೇಷಿಯಾದಿಂದ ಕೆಲ ಅವಧಿಗಾಗಿ ಮಾರ್‌ಬರ್ಗ್ ಯೂನಿವರ್ಸಿಟಿಗಳಲ್ಲಿ ಸಂಶೋಧನೆ ನಡೆಸಲು ಬಂದಿರುತ್ತಾರೆ.

ಡಾ॥ Bodenstein ಅವರು ಫ್ರೆಂಕ್‌ಫರ್ಟ್ ಯೂನಿವರ್ಸಿಟಿಯಲ್ಲಿ ಇಸ್ಲಾಮಿಕ್ ವಿಭಾಗದಲ್ಲಿ ಬೋಧಿಸುತ್ತಿದ್ದಾರೆ.

ರಿದಾ ಇನ್‌ಆವ್ ಸಾಹಿಬ್-ರೇಸನ್ ಯೂನಿವರ್ಸಿಟಿಯಲ್ಲಿ ಇಸಾಮಿಕ್ ವಿಭಾಗದಲ್ಲಿ ಬೋಧಿಸುತ್ತಿದ್ದಾರೆ.

ಆಸಿಮಾ OGER-TUNC ಸಾಹಿಬ ಇವರು ಸಹ ಗೇಸನ್ ಯೂನಿವರ್ಸಿಟಿಯ ಇಸ್ಲಾಮಿಕ್ ವಿಭಾಗದಲ್ಲಿ ಬೋಧಿಸುತ್ತಿದ್ದಾರೆ.

ಡಾ॥ Jurgen milksch ಅವರು ಇಬ್ರಾಹಿಂ ಧಾರ್ಮಿಕ ಘೋರಂಗಳ ಅಧ್ಯಕ್ಷರಾಗಿರುವರು.

ಡಾ॥ ಮಿಸ್‌ಬಾಯುರ್ ರಹ್ಮಾನ್ ಸಾಹಿಬ್ ಫ್ರಂಕ್‌ಫರ್ಟ್ ಯೂನಿವರ್ಸಿಟಿಯಲ್ಲಿ ಇಸ್ಲಾಮಿಕ್ ವಿಭಾಗದಲ್ಲಿ ಬೋಧಿಸುತ್ತಿದ್ದಾರೆ. ಹುಝೂರ್(ಅಬಿಅ) ಈ ಎಲ್ಲಾ ಪ್ರೋಫೆಸರ್‌ಗಳೊಡನೆ ಸರತಿಯಂತೆ ಪರಿಚಯ ಪಡೆದುಕೊಂಡರು.

ನಂತರ ಓರ್ವ ಮಹಿಳಾ ಪ್ರೋಫೆಸರ್ ಧರ್ಮ ಮತ್ತು ಸಂಸ್ಕೃತಿ (Culture) ನಡುವಿನ ವ್ಯತ್ಯಾಸದ ಬಗ್ಗೆ ವಿವರ ಬಯಸಿದರು.

ಆಗ ಹುಝೂರ್(ಅಬಿಅ) ಹೇಳಿದರು. "ಧರ್ಮ ಮತ್ತು Culture ಎರಡೂ ಬೇರೆ ಬೇರೆಯಾಗಿವೆ. ಅದಕ್ಕಾಗಿ ನೀವು ತಫ್ಸೀರುಲ್ ಖುರ್‌ಆನಿನ ಪೀಠಿಕೆ (ದೀಬಾಚ್) ಯನ್ನು ಅಧ್ಯಯನ ಮಾಡಿರಿ." ಹುಝೂರ್(ಅಬಿಅ) ಎಲ್ಲರಿಗೂ ಈ ಗ್ರಂಥದ ಜರ್ಮನ್ ಅನುವಾದದ ಪ್ರತಿಯನ್ನು ಒದಗಿಸಿಕೊಡಲು ಹೇಳಿದರು.

ಆ ಗ್ರಂಥದಲ್ಲಿ ಧರ್ಮ ಎಂದರೇನು ಮತ್ತು Culture ಎಂದರೇನು, ಧರ್ಮದ ಅಗತ್ಯವೇನು ಮತ್ತು ಇಸ್ಲಾಮಿನ ಅಗತ್ಯವೇನು ಎಂಬ ವಿವರಗಳಿವೆ.

ಹುಝೂರ್ ಹೇಳಿದರು: ಧರ್ಮ ಜನರನ್ನು ಯಾವ ರೀತಿಯಲ್ಲಿ ತಮ್ಮ ಬದುಕನ್ನು ನಡೆಸಬೇಕು ಮತ್ತು ಯಾವ ಮಾರ್ಗಗಳನ್ನು ಅನುಸರಿಸಬೇಕು ಎಂದು ತಿಳಿಸುತ್ತದೆ. ಹೊರತು ಜನರು ತಮ್ಮ ನಡವಳಿಕೆಗಳಿಂದ ಮತ್ತು ತಮ್ಮ Culture ಮೂಲಕ ಧರ್ಮವನ್ನು ಬದಲಾಯಿಸಬೇಕೆಂದಲ್ಲ.

ಈ ಮಹಿಳೆ ಸೊಝಾನೆ ಶ್ರೋಟರ್ ಸಾಹಿಬ ಹೇಳಿದರು. ನಾನು ಜರ್ಮನ್ ಸಾಲಾನ (ವಾರ್ಷಿಕ) ಜಲ್ಸದಲ್ಲಿ ಭಾಗವಹಿಸಿದ್ದೆ. ಆ ಸಮಯ ಹುಝೂರ್(ಅಬಿಅ) ರನ್ನು ಬಹಳ ದೂರದಿಂದ ನೋಡಿದ್ದೆ. ಈಗ ನಾನು ಹುಝೂರ್(ಅಬಿಅ) ರ ಮುಂದೆ ಕುಳಿತುಕೊಂಡಿರುತ್ತೇನೆ. ಸಮೀಪದಿಂದ ಭೇಟಿಯಾಗಿರುತ್ತೇನೆ. ಅದರಿಂದ ನನಗೆ ತುಂಬ ಸಂತೋಷವಾಗುತ್ತಿದೆ. ತಾವು ಒಬ್ಬ ವಿನಯಶೀಲ ವ್ಯಕ್ತಿತ್ವವುಳ್ಳರಾಗಿದ್ದೀರಿ ಎಂಬುದನ್ನು ನೋಡುತ್ತಿದ್ದೇನೆ.

ಒಂದು ಪ್ರಶ್ನೆಯ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಧರ್ಮದ ಹೆಸರಿನಲ್ಲಿ ಯಹೂದ್ಯರ ಮತ್ತು ಕ್ರೈಸ್ತರ ನಡುವೆ ತುಂಬ ಪಂಥಗಳಿವೆ ಮತ್ತು ಎಲ್ಲರೂ ತಮ್ಮ ತಮ್ಮ ಪಂಥಗಳಲ್ಲಿ Settle ಆಗಿರುತ್ತಾರೆ. ಆದರೆ ಇಸ್ಲಾಮಿನಲ್ಲಿರುವ ಪಂಥಗಳು ಪರಸ್ಪರ ವಿರೋಧಾಭಾಸ ಹೊಂದಿರುತ್ತವೆ. ಒಬ್ಬರು ಇನ್ನೊಬ್ಬರ ವಿರುದ್ಧ ಕೆಂಡಕಾರುತ್ತಾರೆ. ಇವೆಲ್ಲ ಭಿನ್ನಾಭಿಪ್ರಾಯಗಳನ್ನೂ ಸಮಸ್ಯೆಗಳನ್ನೂ ಪರಿಹರಿಸಿ ಎಲ್ಲರೂ ಒಟ್ಟಾಗಬೇಕು. ಇದುವೇ ಒಬ್ಬ ಮುಸಲ್ಮಾನನ ಆದ್ಯ ಕರ್ತವ್ಯವಾಗಿದೆ.

ಇನ್ನೊಂದು ಪ್ರಶ್ನೆ ಮಾಡಲಾಯಿತು – ನೀವು ಸುನ್ನಿಗಳ ಜೊತೆಯಲ್ಲಿ ಯಾವ ರೀತಿಯ ಸಂಬಂಧವನ್ನು ಹೊಂದಿರುವಿರಿ? ಅದರಲ್ಲಿ ಏನಾದರೂ ಪ್ರಗತಿಯಾಗಿದೆಯೇ?

ಆ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ನಾವು ಓಪನ್ ಆಗಿದ್ದೇವೆ. ನಮ್ಮೊಡನೆ ಯಾರು ಸಹ ಮಾತನಾಡಲು ಬಂದರೆ ನಾವು ಸಹಾ ಸಿದ್ಧರಾಗಿದ್ದೇವೆ. ಆದರೆ ವಿರೋಧ ಮಾಡುವ ಮೌಲ್ವಿಗಳು ಬರುತ್ತಿಲ್ಲ. ಅವರುಗಳು ಒಂದು ವೇದಿಕೆಯಲ್ಲಿ ಬಂದರೆ ನಮ್ಮಲ್ಲಿ ಭಿನ್ನಮತವಿಲ್ಲದ ವಿಷಯಗಳ ಮೇಲೆ ಮಾತನಾಡಬಹುದು. ಅಲ್ಲಾಹನ ಪ್ರವಾದಿ ಒಬ್ಬರೇ, ಪವಿತ್ರ ಖುರ್‌ಆನ್ ಒಂದೇ. ಹಝ್ರತ್ ರಸೂಲುಲ್ಲಾಹ್(ಸ) ರವರ ಸುನ್ನತ್ ಒಂದೇ, ಆ ಕುರಿತು ಮಾತನಾಡಬಹುದು. ಕೆಲವು ಭಿನ್ನಾಭಿಪ್ರಾಯ ಹೊಂದಿದ ವಿಷಯಗಳ ಹೊರತು ಉದಾಹರಣೆಗೆ 'ಫಿಖ್‌ಹಿ" ಇತ್ಯಾದಿ ವಿಷಯಗಳು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿರುವನು. **'ತಆಲು ಇಲಾ ಕಲಿಮತಿನ್ ಸವಾಯಿನ್ ಬೈನನಾ ವ ಬೈನಕುಮ್"** ನಮ್ಮ ನಿಮ್ಮಲ್ಲಿ ಹೊಂದಾಣಿಕೆಯಿರುವ ವಿಷಯಗಳತ್ತ ಬನ್ನಿರಿ. ನಾವಂತೂ ತಯಾರಿದ್ದೇವೆ. ಆದರೆ ಬೇರೆ ಕಡೆಯಿಂದ ವಿರೋಧಿಗಳು ಬರುತ್ತಿಲ್ಲ.

ಇಂಡೋನೇಷಿಯಾದ ಡಾ॥ ಮುಹಮ್ಮದ್ ವಲ್ದಾನ್ ಸಾಹಿಬ್ ಪ್ರಶ್ನೆ ಕೇಳಿದರು. ಲಾಹೋರಿಗಳು ಎಂದರೆ ಯಾರು? ಅವರಿಗೂ ಖಾದಿಯಾನಿಗಳಿಗೂ ಏನು ವ್ಯತ್ಯಾಸವಿದೆ?

ಆಗ ಹುಝೂರ್(ಅಬಿಅ) ಹೇಳಿದರು. ಖಾದಿಯಾನಿ ಪದ ಬಳಕೆ ಸರಿಯಲ್ಲ, ಮಬಾಯೆ ಅಹ್ಮದಿ ಮತ್ತು ಗೈರ್ ಮಬಾಯೆ ಎಂದಾಗಬೇಕು. ಹಝ್ರತ್ ಅಕ್‌ದಸ್ ಮಸೀಹ್ ಮೌಊದ್(ಅ) ರವರ ನಿಧನದ ನಂತರ ಯಾರು ಖಿಲಾಫತ್ ವ್ಯವಸ್ಥೆಯನ್ನು ಸ್ವೀಕರಿಸಿದ್ದಾರೋ ಅವರು ಮಬಾಯೆ ಅಹ್ಮದಿಗಳಾಗಿದ್ದಾರೆ ಮತ್ತು ಯಾರು ಸ್ವೀಕರಿಸಿಲ್ಲವೋ ಅವರು ಗೈರ್ ಮಬಾಯೆಯಾಗಿದ್ದಾರೆ. ಖಿಲಾಫತ್ ವ್ಯವಸ್ಥೆ ಬಿಟ್ಟವರು ಶ್ರೀಮಂತ ಜನರಾಗಿದ್ದರು. ಈಗ ಅವರು ಅಲ್ಪ ಸಂಖ್ಯಾತರಾಗಿದ್ದಾರೆ ಮತ್ತು ಕೆಲವೇ ದೇಶಗಳಲ್ಲಿದ್ದಾರೆ. ದಕ್ಷಿಣ ಅಮೇರಿಕದ ಕೆಲವು ದೇಶಗಳಲ್ಲಿದ್ದಾರೆ. ಪಾಕಿಸ್ತಾನದಲ್ಲಿ ಕೂಡಾ ಅವರದೇ ಆದ ಒಂದು ವ್ಯವಸ್ಥೆ ಇದೆ. ಇಂಡೋನೇಷಿಯದಲ್ಲೂ. ಅವರಿಗೆ ಯಾವುದೇ ಒಬ್ಬ ಲೀಡರ್ ಎಂಬುದಿಲ್ಲ. ಅವರ ಸಂಖ್ಯೆ ತುಂಬ ಕಡಿಮೆ ಇದೆ. ಪರಸ್ಪರ ವಿಭಜಿಸಲ್ಪಟ್ಟಿವೆ.

ಅಹ್ಮದಿಯಾ ಜಮಾಅತ್ ಅವರ ಇಮಾಮ್, ಒಬ್ಬ ಖಲೀಫ ಮತ್ತು ಒಬ್ಬನೇ ಒಬ್ಬ ನೇತಾರರಾಗಿದ್ದಾರೆ. ಅಮೇರಿಕಾ, ರಷ್ಯಾ, ಆಸ್ಟ್ರೇಲಿಯಾ ಹೀಗೆ ಇಡೀ ಲೋಕದಲ್ಲಿ ಅಹ್ಮದಿಯಾ ಜಮಾಅತಿಗೆ ಒಂದೇ ವ್ಯವಸ್ಥೆ ಇದೆ. ಅದು ಖಲೀಫರ ಜೊತೆಯಾಗಿದೆ. ಹುಝೂರ್(ಅಬಿಅ) ಹೇಳಿದರು – ನಾವು ಇಂತಹ ಹಲವು ಜನರೊಂದಿಗೆ ಜೊತೆಯಾಗಿದ್ದೇವೆ. ಅವರು ಅಹ್ಮದಿಯಾ ಖಿಲಾಫತ್ತನ್ನು ನಂಬುವುದಿಲ್ಲ. ಆದರೆ ನಾವು ಮಸೀಹ್ ಮೌಊದ್(ಅ) ರವರನ್ನು ಮುಜದ್ದಿದ್ ಎಂದು ನಂಬುತ್ತೇವೆ.

ಹುಝೂರ್(ಅಬಿಅ) ಹೇಳಿದರು. ನನ್ನ ಖಿಲಾಫತ್ ಅವಧಿಯಲ್ಲಿ ಹಲವು ಗೈರು ಮುಬಾಯೀನರು ಅಹ್ಮದಿಯತ್ತಿಗೆ ಸೇರಿ ನಮ್ಮೊಡನೆ ಬೆರೆತಿದ್ದಾರೆ. ನಾವು ಬೇರೆಯಾಗಿಲ್ಲ, ಆದರೆ ಅವರು ಬೇರೆಯಾಗಿದ್ದಾರೆ. ಅವರ ಜೊತೆ ನಮ್ಮ ಸಂಪರ್ಕವಿದೆ. ಸಂಬಂಧ ವ್ಯವಹಾರ ನಡೆಯುತ್ತದೆ. ಬರ್ಲಿನ್, ಜರ್ಮನಿಯಲ್ಲಿ ಅವರ ಒಂದು ಮಸೀದಿಯಿದೆ. ಅದು ಅವರ ಮೊಟ್ಟ ಮೊದಲ ಮಸೀದಿಯಾಗಿದೆ. ನಾನು ಸ್ವಯಂ ಅಲ್ಲಿಗೆ ಹೋಗಿರುತ್ತೇನೆ ಮತ್ತು ಅವರೊಡನೆ ಭೇಟಿಯಾಗಿರುತ್ತೇನೆ.

ಪ್ರೊಫೆಸರ್ ಒಬ್ಬರು ಕೇಳಿದರು ತಾವು ಧರಿಸಿರುವ ಪಗಡಿ ಒಂದು ವಿಶೇಷವಾದ ವಸ್ತ್ರಧಾರಣೆಯಾಗಿದೆಯೇ?

ಆಗ ಹುಝೂರ್(ಅಬಿಅ) ಹೇಳಿದರು. ಅದೊಂದು ಸಾಂಪ್ರದಾಯಿಕ ವಸ್ತ್ರಧಾರಣೆಯಾಗಿದೆ. ನನಗಿಂತ ಹಿಂದಿನ ಖಲೀಫರು ಸಹ ಇಂತಹ ಶಿರೋಧಾರಣೆಯನ್ನು ಬಳಸುತ್ತಿದ್ದರು. ಇದು ಯಾವುದೇ ವಿಶೇಷ ರೀತಿಯ ಪಾಕಿಸ್ತಾನಿ ವೇಷವಲ್ಲ. ಸಲ್ವಾರ್, ಅಂಗಿ, Troussers, Jeans ಬಯಸಿದ್ದನ್ನು ಧರಿಸಬಹುದಾಗಿದೆ. ವಿವಿಧ ಸಮುದಾಯಗಳಲ್ಲಿ ವಿವಿಧ ವೇಷಗಳಿವೆ, ಯೂರೋಪಿಯನ್ Culture ಇದೆ, ಅರಬರು ತಮ್ಮ ಉದ್ದವಾದ ವೇಷ ಧರಿಸುತ್ತಾರೆ. ಇಂಡೋನೇಷಿಯಾದಲ್ಲಿ ಭಿನ್ನ Culture ಇದೆ. ಅಲ್ಲಿ ವಿವಿಧ ಬಣ್ಣಗಳ ಅಂಗಿಗಳನ್ನು ಧರಿಸುತ್ತಾರೆ. ಅದೇ ರೀತಿ ಎಲ್ಲ ಕಡೆ ತನ್ನದೇ ಆದ ಒಂದು ವೇಷ ಭೂಷಣವಿದೆ. ಪ್ರತಿಯೊಂದು ಪ್ರದೇಶದಲ್ಲಿ ತನ್ನದೇ ಆದ ಟೋಪಿಗಳಿವೆ. ಜರ್ಮನಿ ಅಮೀರ್ ಸಾಹಿಬರ ಕಡೆ ದೃಷ್ಟಿ ಹಾಯಿಸಿ ಹೇಳಿದರು. ನೋಡಿರಿ, ಅಮೀರ್ ಸಾಹೇಬರು ತಮ್ಮ ವಿಶೇಷ ರೀತಿಯ ಟೋಪಿ ಧರಿಸಿದ್ದಾರೆ.

ಗಡ್ಡದ ಬಗ್ಗೆ ಕೇಳಿದ ಒಂದು ಪ್ರಶ್ನೆಯ ಉತ್ತರ ನೀಡುತ್ತ ಹೇಳಿದರು. ಇದು ಹಝ್ರತ್ ರಸೂಲುಲ್ಲಾಹ್(ಸ) ರವರ ಸುನ್ನತ್ ಆಗಿದೆ. ನಿಮಗೆ ನಬಿಕರೀಮ್(ಸ) ರವರೊಂದಿಗೆ ಪ್ರೀತಿಯಿದ್ದರೆ ಅವರ ಸುನ್ನತ್ ಮೇಲೆ ನಡೆಯಿರಿ. ಒಬ್ಬ ಪುರುಷ ಪುರುಷನ ಹಾಗೆ ಕಾಣುವಂತಾಗಬೇಕು. ರಸೂಲುಲ್ಲಾಹ್(ಸ) ಹೇಳಿದ್ದರು. ಮೀಸೆಗಳನ್ನು ಕತ್ತರಿಸಿರಿ ಮತ್ತು ಗಡ್ಡವಿಟ್ಟುಕೊಳ್ಳಿರಿ ಎಂದು.

ಹುಝೂರ್(ಅಬಿಅ) ಹೇಳಿದರು. ಗಡ್ಡ ಇಟ್ಟುಕೊಳ್ಳುವುದು ಸುನ್ನತ್ ಆಗಿದೆ. ಆದರೆ ಎಷ್ಟು ಬೇಕು. ಎಷ್ಟು ಬೇಡ ಎಂಬುದು ನಿಮಗೆ ಸೇರಿದ್ದು, ನೀವು ಬಯಸಿದ ರೀತಿ ಇಟ್ಟುಕೊಳ್ಳಬಹುದು.

ABRAHAMIC, NON ABRAHAMIC ಧರ್ಮಗಳ ಪರಸ್ಪರ ಸಹಕಾರದ ಕುರಿತು ಒಂದು ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಎಲ್ಲ ಧರ್ಮಗಳು ದೇವನಿಂದ ಬಂದುದಾಗಿವೆ. ಅಲ್ಲಾಹನು ಎಲ್ಲ ಸಮುದಾಯಗಳಲ್ಲೂ ಪ್ರವಾದಿಗಳನ್ನು ಕಳುಹಿಸಿದ್ದಾನೆ. ಹೀಗಿರುವಾಗ ಪರಸ್ಪರ ಸಹಕಾರ ಅನಿವಾರ್ಯವಾಗಿದೆ.

ಹಝ್ರತ್ ಅಕ್‌ದಸ್ ಮಸೀಹ್ ಮೌಊದ್(ಅ) ತಮ್ಮ ಒಂದು ಗ್ರಂಥದಲ್ಲಿ ಬರೆದಿದ್ದಾರೆ – ಭಾರತದಲ್ಲಿ ವಿವಿಧ ಧರ್ಮಗಳ ಜನರು ನೆಲೆಸಿದ್ದಾರೆ. ನಾವೆಲ್ಲರೂ ಒಂದೇ ದೇಶದ ಪ್ರಜೆಗಳು, ಆದುದರಿಂದ ಪರಸ್ಪರ ಸಹಕಾರದಿಂದ ಇರಬೇಕಾಗಿದೆ. ಯಾರು ಸಹ ಇನ್ನೊಬ್ಬರ ಧರ್ಮದ ವಿರುದ್ಧವಾಗಿ ಮಾತನಾಡದಂತೆ ಒಂದು ನಿಯಮ ಮಾಡಬೇಕು. ಪ್ರತಿಯೊಂದು ಧರ್ಮದವರು ಇತರ ಧರ್ಮಗಳನ್ನು ಗೌರವಿಸಬೇಕು. ಅವರು ಹಿಂದುಗಳನ್ನು ಸಂಬೋಧಿಸಿ ಹೇಳಿದರು. ನೀವು ನಮ್ಮ ಪ್ರವಾದಿ(ಸ) ರವರನ್ನು ಅವಹೇಳನ ಮಾಡದಿದ್ದರೆ ನಾವು ನಿಮ್ಮ ಜೊತೆಯಲ್ಲಿರುವೆವು. ಗೋವು ನಮಗೆ ಹಲಾಲ್ ಆಗಿದೆ. ಆದರೂ ನಾವು ನಿಮಗೋಸ್ಕರ ಅದರ ಮಾಂಸ ತಿನ್ನದಿರುವೆವು. ಅಥವಾ ನಿಮ್ಮ ಮುಂದೆ ತಿನ್ನೆವು. ನಾವೆಲ್ಲರೂ ಒಬ್ಬರು ಇನ್ನೊಬ್ಬರನ್ನು ಗೌರವಿಸಬೇಕು ಮತ್ತು ಒಬ್ಬರು ಇನ್ನೊಬ್ಬರ ರೀತಿ ರಿವಾಜುಗಳಿಗೆ ಆದರ ತೋರಿಸಬೇಕು.

ಹುಝೂರ್(ಅಬಿಅ) ಹೇಳಿದರು. ನಾವು ಎಲ್ಲ ರೀತಿಯಿಂದ ಸಹಕರಿಸುತ್ತೇವೆ ಮತ್ತು ಸಹಾಯ ಹಸ್ತ ನೀಡುತ್ತೇವೆ. ಇಂದು ಸಹ ಭಾರತದ ಖಾದಿಯಾನ್‌ನಲ್ಲಿ ಹಿಂದೂಗಳೂ, ಸಿಖ್ಖರೂ ನಮ್ಮ ಕಾರ್ಯಕ್ರಮಗಳಿಗೆ ಬರುತ್ತಾರೆ. ಅವರು ನಮ್ಮನ್ನು ಗೌರವಿಸುತ್ತಾರೆ. ನಾವು ಅವರನ್ನು ಗೌರವಿಸುತ್ತೇವೆ. ಈಗ ಆ ಜನರು ಹೇಳುತ್ತಾರೆ ನಮಗೆ ಅಹ್ಮದಿಯರಿಂದಲೇ ನಿಜವಾದ ಇಸ್ಲಾಮಿನ ಅರಿವಾಗಿದೆ ಎಂದು.

ಒಂದು ಪ್ರಶ್ನೆ, ಧರ್ಮದ ಕುರಿತು, ಹೀಗೆ ಕೇಳಲಾಯಿತು. ಯಾವ ರೀತಿ ಇಲ್ಲಿ ಶಾಲೆಗಳಲ್ಲಿ ಅಬ್ರಾಹಾಮಿಕ್ ಧರ್ಮ ಕಲಿಸುತ್ತಾರೆಯೇ ಹಾಗೆಯೇ ಪಾಕಿಸ್ತಾನದಲ್ಲಿ ಆಗಲು ಸಾಧ್ಯವೇ?

ಈ ಪ್ರಶ್ನೆಯ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಪಾಕಿಸ್ತಾನದಲ್ಲಿ ನೀವು ಉಗ್ರವಾದದಿಂದ ದೇಶವನ್ನು ರಕ್ಷಿಸಬಯಸಿದರೆ ಮಾಡಬಹುದು.

ಇಲ್ಲವಾದರೆ ಸಾಧ್ಯವಿಲ್ಲ. ಹೇಳಿದರು. ವಿವಿಧ ಪಂಗಡಗಳ ಮಧ್ಯೆ ಇರುವ ಭಿನ್ನಾಭಿಪ್ರಾಯಗಳೇ ಕೊನೆಗೊಳ್ಳುವುದಿಲ್ಲ. ಸೌದಿ ಅರೇಬಿಯಾದಲ್ಲಿ ಸಲಫಿ ವಹಾಬಿಗಳು ಹೇಳಿಕೊಳ್ಳುತ್ತಾರೆ. ನಾವೇ ಶ್ರೇಷ್ಠರು. ಪಾಕಿಸ್ತಾನದಲ್ಲಿ ಒಂದು ಪಂಗಡದವರು ಇನ್ನೊಂದು ಪಂಗಡದ ವಿರುದ್ಧ ಮಾತನಾಡುತ್ತಾರೆ. ಆದುದರಿಂದ ಅಲ್ಲಿ ಇದು ಸಾಧ್ಯವಿಲ್ಲ. ಆದರೆ ಮುಸಲ್ಮಾನರ ಮತ್ತು ಇತರರ ಮಧ್ಯ ಶಾಂತಿ ಸ್ಥಾಪನೆ ಮಾಡುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕಾಗಿದೆ.

ಓರ್ವ ಮಹಿಳಾ ಪ್ರೊಫೆಸರ್ ಪ್ರಶ್ನೆ ಮಾಡಿದರು. ಜರ್ಮನಿಯಲ್ಲಿ ನಿಮ್ಮ ಸಮುದಾಯ ತುಂಬ ಸಕ್ರಿಯವಾಗಿದೆ. ಈಗ ನಿಮ್ಮ ಮುಂದೆ ಇರುವ ಗುರಿ ಏನು?

ಅದರೆ ಉತ್ತರ ನೀಡುತ್ತಾ ಹುಝೂರ್(ಅಬಿಅ) ಹೇಳಿದರು. ನಾವಂತೂ ಈ ದೇಶದಲ್ಲೂ, ಇಡೀ ಲೋಕದಲ್ಲೂ ಇಸ್ಲಾಮಿನ ನಿಜವಾದ ರೂಪವನ್ನು ಪ್ರದರ್ಶಿಸ ಬಯಸುತ್ತೇವೆ. ನಾವು ಒಂದು ಮಿಷನರಿ ಆರ್ಗನೈಝೇಶನ್ ಆಗಿದ್ದೇವು. ಆಫ್ರಿಕಾದಲ್ಲಿ ನಮ್ಮ ಜನಹಿತ ಕಾರ್ಯಗಳು ಬೇಕಾದಷ್ಟಿವೆ. ಇಲ್ಲಿ ಜರ್ಮನಿಯಲ್ಲಿ ಕಡಿಮೆ ಇದೆ. ಪವಿತ್ರ ಖುರ್‌ಆನಿನ ಶಿಕ್ಷಣವಾಗಿದೆ. ಅಗತ್ಯಯುಳ್ಳವರ ಬಗ್ಗೆ ವಿಚಾರಿಸಿರಿ, ಅನಾಥರ ಬಗ್ಗೆ ವಿಚಾರಿಸಿರಿ, ಅಂತೂ ಮಿಷನರಿಯ ಪ್ರಚಾರದ ಜೊತೆಯಲ್ಲಿ ಜನಹಿತ ಕಾರ್ಯಗಳೂ ಮಾಡುತ್ತೇವೆ, ದಾನಧರ್ಮದಂತಹ ಕಾರ್ಯಕ್ರಮಗಳೂ ನಡೆಯುತ್ತಿವೆ. ಸಂಗ್ರಹವಾದ ಹಣವನ್ನು ನಾವು ವಿವಿಧ charity ಗಳಲ್ಲಿ ಹಂಚುತ್ತೇವೆ.

ರಸೂಲುಲ್ಲಾಹ್(ಸ) ನುಬುವ್ವತಿಗಿಂತ ಮುಂಚೆ "ಹಲಫುಲ್ ಫುಝೂಲ್" ಎಂಬ ಸಂಸ್ಥೆಯ ಸದಸ್ಯರಾಗಿದ್ದರು. ಈ ಸಂಸ್ಥೆಯು ಬಡವರ, ತುಳಿತಕ್ಕೊಳಗಾದವರ, ಅಗತ್ಯವುಳ್ಳವರ ಸಹಾಯ ಮಾಡುತ್ತಿತ್ತು ಮತ್ತು ಅವರ ಹಕ್ಕುಗಳನ್ನು ಪೂರೈಸುತ್ತಿದ್ದವು. ನುಬುವ್ವತ್ ಪದವಿ ಪಡೆದ ನಂತರವೂ ರಸೂಲುಲ್ಲಾಹ್(ಸ) ಹೇಳಿದರು. ಈಗಲೂ ಆ ಸಂಸ್ಥೆಯವರು ಆಹ್ವಾನಿಸಿದರೆ ಬಡವರ ಸಹಾಯಕ್ಕಾಗಿ ಅದರಲ್ಲಿ ಭಾಗವಹಿಸುವೆನು ಎಂದು.

ಇನ್ನೊಂದು ಪ್ರಶ್ನೆ – ನೀವು ದೇಶಪ್ರೇಮಿಗಳಾಗಿದ್ದೀರಿ. ನಿಮಗೆ ಪಾಕಿಸ್ತಾನಕ್ಕೆ ಮರಳಿ ಹೋಗುವ ಇರಾದೆ ಅಥವಾ ಯೋಜನೆ ಏನಾದರೂ ಇದೆಯೇ?

ಆ ಪ್ರಶ್ನೆಗೆ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ದೇಶವು ಉಗ್ರವಾದದಿಂದ ಮುಕ್ತವಾದರೆ ಅಹ್ಮದಿಯರು ಮರಳಿ ಹೊಗಲೂ ಬಹುದು. ಅಲ್ಲಿ ನೆಲಸಬಹುದು. ಎಲ್ಲಿಯವರೆಗೆ ಅಲ್ಲಿ 1974 ರ ಕಾನೂನು ಜಾರಿಯಲ್ಲಿದೆಯೋ, ಪಾಕಿಸ್ತಾನದಲ್ಲಿರಬೇಕಾದರೆ ಅವರು ತಮ್ಮನ್ನು ಅಮುಸ್ಲಿಮರೆಂದು ಒಪ್ಪಿಕೊಳ್ಳಬೇಕು. ಹಾಗಾಗಿ, ಅಲ್ಲಿಯತನಕ ಅಲ್ಲಿರಲು ಸಾಧ್ಯವಿಲ್ಲ.

ಪಾಕಿಸ್ತಾನದಲ್ಲಿ ಅರಿವಿಲ್ಲದ ಜನರನ್ನು ಮೌಲ್ವಿಗಳು ದಾರಿ ತಪ್ಪಿಸುತ್ತಾರೆ. ಆ ಜನರನ್ನು ನಮ್ಮ ವಿರುದ್ಧ ತಮ್ಮ ಮಸೀದಿಗಳಲ್ಲಿ ಉತ್ತೇಜಿಸುತ್ತಾರೆ. ಈ ಮೌಲ್ವಿಗಳು ಅಮಾಯಕ ಜನರ ಮೇಲೆ ಹಿಡಿತ ಸಾಧಿಸಿದ್ದಾರೆ. ಯಾವಾಗ ಬೇಕಾದರೂ ಅವರನ್ನು ಉತ್ತೇಜಿಸಬಲ್ಲವರಾಗಿದ್ದಾರೆ. ನಾನಂತೂ ಪರಸ್ಪರ ಸಹಕಾರದಿಂದ ಸೌಹಾರ್ಧತೆಯಿಂದ ಇರಬಯಸುತ್ತೇನೆ. ಆದರೆ ಅವರು ಇರಲು ಬಿಡುವುದಿಲ್ಲ. ಪಾಕಿಸ್ತಾನದಲ್ಲಿ ಅಮುಸ್ಲಿಮ್ ಎಂಬ ಕಾನೂನು ಇರುವವರೆಗೆ ಆ ದೇಶದಲ್ಲಿ ಬದಲಾವಣೆ ಉಂಟಾಗಲು ಸಾಧ್ಯವಿಲ್ಲ.

ಓರ್ವ ಪ್ರೊಫೆಸರ್ ಪ್ರಶ್ನೆ ಮಾಡಿದರು. ನಿಮ್ಮಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ. ನಟನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ. ಸಿನಿಮಾ ಥಿಯೇಟರ್ ಹೋಗಲು ನಿಷೇಧವಿದೆ.

ಆ ಪ್ರಶ್ನೆಯ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಐರ್ಲ್ಯಾಂಡ್ ಎಲ್ಲದ್ದಕ್ಕಿಂತ ಹೆಚ್ಚು ಕ್ರೈಸ್ತ ಮತದಂತೆ ನಡೆಯುವ ದೇಶವಾಗಿದೆ. ಈಗ ಅವರು Homosexuality ಕಾನೂನು ಪಾಸ್ ಮಾಡಿದೆ. ಪವಿತ್ರ ಖುರ್‌ಆನ್ ಮತ್ತು ಬೈಬಲ್ ಅದನ್ನು ಪಾಪವೆಂದು ಪರಿಗಣಿಸುತ್ತದೆ. ಈಗ ಅವರು ಈ ಕಾನೂನನ್ನು ರಚನೆ ಮಾಡಲು ರೆಫ್ರಂಡಮ್ ಪ್ರಸ್ತುತಪಡಿಸಿದ್ದಾರೆ. ಆರ್ಚ್ ಬಿಷಪ್ ಹೇಳಿದರು. ರೆಫ್ರಂಡಮ್ ಕಾರಣದಿಂದ ನಮಗೆ ನಮ್ಮ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು. Homosexuality ಕಾನೂನು ಬೇಕಾಗಿದೆ ಎಂದು. ಧರ್ಮವನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಅದುವೇ ವಾಸ್ತವವಾಗಿದೆ. ಹೊರತು ಧರ್ಮವನ್ನು ಜನರು ಬದಲಾಯಿಸುವುದು ಸರಿಯಲ್ಲ.

ಹುಝೂರ್(ಅಬಿಅ) ಹೇಳಿದರು. ನಾವು ಇಸ್ಲಾಮಿ ಶಿಕ್ಷಣದಂತೆ ನಡೆದುಕೊಳ್ಳುತ್ತೇವೆ ಅಹ್ಮದಿಯಾ ಸಮುದಾಯದ ಮಹಿಳೆಯರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಅವರು ಎಲ್ಲ ಕಾರ್ಯಕ್ರಮಗಳನ್ನು ತಾವೇ ನಿಯೋಜಿಸಿಕೊಳ್ಳುತ್ತಾರೆ. ಅದಕ್ಕೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಜಲ್ಸ ಸಾಲಾನ ಯು.ಕೆ ನಲ್ಲಿ ಓರ್ವ ಮಹಿಳಾ ಪತ್ರಕರ್ತೆ ಲಜ್ನ ಜಲ್ಸ ಸ್ಥಳಕ್ಕೆ ಬಂದಿದ್ದರು. ಲಜ್ನ ಜಲ್ಸ ಸ್ಥಳವನ್ನು ಮಹಿಳಾ ಕಾರ್ಯಕರ್ತೆಯರು ಸ್ವಯಂ ನಿಯೋಜಿಸಿದ್ದರು. ಎಲ್ಲಾ ಕಾರ್ಯಕ್ರಮಗಳೂ ಅವರದ್ದೇ ಆಗಿದ್ದವು. ಆ ಪತ್ರಕರ್ತೆ ನಂತರ ಹೇಳಿದರು – ನನಗೆ ಇಲ್ಲಿ ಬರುವ ಮುಂಚೆ ತುಂಬಾ ಆತಂಕಗಳಿದ್ದುವು. ನನ್ನೊಡನೆ ಯಾವ ರೀತಿ ವ್ಯವಹರಿಸುವರೋ, ನನಗೆ ಏನೇನೆಲ್ಲ ಅಡೆ ತಡೆಗಳನ್ನು ಅನುಭವಿಸಬೇಕಾಗಬಹುದೋ ಎಂದು, ಆದರೆ ಇಲ್ಲಿ ನಾನು ತುಂಬ ಸ್ವಾತಂತ್ರ್ಯವನ್ನು ಅನುಭವಿಸಿದ್ದೇನೆ. ಎಲ್ಲ ಕೆಲಸ ಕಾರ್ಯಗಳೂ ಸ್ವತಂತ್ರವಾಗಿ ನಡೆಯುತ್ತಿದ್ದವು. ನಾನೂ ಚರ್ಚ್‌ಗೆ ಹೋಗುತ್ತೇನೆ. ಅಲ್ಲಿ ಎಂದೂ ನನಗೆ ಇಲ್ಲಿ ದೊರೆತಷ್ಟು ಗೌರವ ದೊರೆತಿಲ್ಲ.

16, 17 ಸಾವಿರ ಮಹಿಳೆಯರು ತಮ್ಮ ಕಾರ್ಯಕ್ರಮದಲ್ಲಿ ಸ್ವತಂತ್ರರಾಗಿದ್ದರು. ನನಗೆ ಇಲ್ಲಿ ತುಂಬ ಸಂತೋಷ ದೊರೆತಿದೆ. ಯಾವ ಪುರುಷ ಮಹಾಶಯರೂ ನನ್ನೆಡೆ ನೋಡುವುದಿಲ್ಲ. ನಾನು ನನ್ನನ್ನು ಎಲ್ಲ ರೀತಿಯಿಂದ ಸುರಕ್ಷಿತೆ ಎಂದು ಭಾವಿಸುವಂತಾಯಿತು.

ಹುಝೂರ್(ಅಬಿಅ) ಹೇಳಿದರು. ಇಲ್ಲಿ ಯೂರೋಪಿಯನ್ ಮಹಿಳೆಯರು ಇಸ್ಲಾಮ್ ಸ್ವೀಕರಿಸುವ ಮುಂಚೆ ಸ್ವತಂತ್ರ ಸಮಾಜದಲ್ಲಿದ್ದವರಾಗಿದ್ದರು. ಈಗ ಇಸ್ಲಾಮಿ ಶಿಕ್ಷಣದಂತೆ ನಡೆದುಕೊಳ್ಳುತ್ತಾರೆ. ನಾವು ಈಗ ಹೆಚ್ಚು ಸಂತೋಷದಲ್ಲಿದ್ದೇವೆ ಎಂದು ಹೇಳುತ್ತಾರೆ. ತಾವು ಹೆಚ್ಚು ಸುರಕ್ಷಿತರು ಎಂದು ಭಾವಿಸುತ್ತಾರೆ. ನಮ್ಮಲ್ಲಿ ಮಹಿಳಾ ವೈದ್ಯರಿದ್ದಾರೆ, ಇಂಜಿನಿಯರಿದ್ದಾರೆ, ಶಿಕ್ಷಕಿಯರಿದ್ದಾರೆ, ಅವರು ಪರದೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ತಮ್ಮನ್ನು ಹೆಚ್ಚು ಸುರಕ್ಷಿತರೆಂದು ಭಾವಿಸುತ್ತಾರೆ. ಅಂತೂ ಸ್ವಾತಂತ್ರ್ಯದ ಮೌಲ್ಯಗಳು ಮಾತ್ರ ವಿಭಿನ್ನವಾಗಿವೆ. ಅದರ ಅನುಭವವಾದರೆ ಆ ಬಗ್ಗೆ ಪ್ರಶ್ನೆಗಳು ಬರಲಿಕ್ಕಿಲ್ಲ.

ಒಂದು ಪ್ರಶ್ನೆ ಹೀಗೆ ಕೇಳಲಾಯಿತು. ನೀವು ಇತರರಂತೆ ಬಹುಸಂಖ್ಯಾತರಾಗಿದ್ದಲ್ಲಿ ಅಲ್ಪ ಸಂಖ್ಯಾತರೊಂದಿಗೆ ನಿಮ್ಮ ವ್ಯವಹಾರ ಹೇಗಿರುತ್ತಿತ್ತು?

ಆ ಪ್ರಶ್ನೆಯ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಪ್ರವಾದಿ(ಸ) ರವರ ಮೇಲೆ ಯುದ್ಧ ಹೇರಲಾಗಿದ್ದರೂ ಅದರ ಎದುರಾಗಿ ತಮ್ಮ ರಕ್ಷಣೆ ಮಾಡಿಕೊಳ್ಳಲು ಯುದ್ಧನಡೆದಾಗ ಪಾದರಿಯವರನ್ನು ಕೊಲ್ಲಬಾರದು, ಯಾವ ಚರ್ಚ್ ಮತ್ತು Synagogue ನ ಮೇಲೆ ಹಲ್ಲೆ ಮಾಡಬಾರದು ಮತ್ತು ಅವುಗಳನ್ನು ಹಾನಿಗೊಳಿಸಬಾರದು. ಈ ರೀತಿ ಯುದ್ಧಗಳಲ್ಲಿಯೂ ಅಲ್ಪಸಂಖ್ಯಾತರನ್ನು ರಕ್ಷಿಸಲಾಯಿತು.

ಹುಝೂರ್(ಅಬಿಅ) ರಬ್ವಾದ ಉದಾಹರಣೆಯನ್ನು ನೀಡುತ್ತಾ, ರಬ್ವಾದಲ್ಲಿ 98% ಜನಸಂಖ್ಯೆ ಅಹ್ಮದಿಯರದ್ದಾಗಿದೆ. ಉಳಿದವರಲ್ಲಿ ಅಲ್ಲಿ ಕ್ರೈಸ್ತರೂ ಇದ್ದಾರೆ, ಕೆಲವರು ಹಿಂದೂಗಳು ಇದ್ದಾರೆ. ತಮ್ಮ ಎಲ್ಲ ಹಕ್ಕುಗಳೊಂದಿಗೆ ಅವರು ಶಾಂತಿಯಿಂದ ಇರುತ್ತಾರೆ. ಅಲ್ಲದೇ ಕ್ರೈಸ್ತರಿಗೆ ಚರ್ಚ್‌ಗೋಸ್ಕರ ನಾವು ಭೂಮಿಯನ್ನು ಕೊಟ್ಟಿದ್ದೇವೆ.

ಹುಝೂರ್(ಅಬಿಅ) ಹೇಳಿದರು. ಪವಿತ್ರ ಖುರ್‌ಆನ್ ಹೇಳುತ್ತದೆ. **"ಲಾ ಇಕ್ರಾಹ ಫಿದ್ದೀನ್"** ಧರ್ಮದಲ್ಲಿ ಯಾವ ಬಲವಂತವು ಇಲ್ಲ. ಧರ್ಮದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕು ಯಾರಿಗೂ ಇಲ್ಲ.

ಪ್ರೊಫೆಸರ್‌ರೊಬ್ಬರು ಪ್ರಶ್ನೆ ಮಾಡಿದರು. ಐರ್ಲ್ಯಾಂಡಿನಲ್ಲಿ Gay Marriage ನ ನಿರ್ಣಯವಾಗಿದೆ. ಅಲ್ಲಿ ಅಹ್ಮದಿಯರು ಏನು ಮಾಡುವರು? ಆ ಪ್ರಶ್ನೆಗೆ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಜರ್ಮನಿಯಲ್ಲೂ ಅಹ್ಮದಿಯರು ನೆಲೆಸಿದ್ದಾರೆ. ಯು.ಕೆ ಯಲ್ಲೂ ವಾಸಿಸುತ್ತಾರೆ. ಇದೀಗ ಯು.ಕೆ ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ತುಂಬ ಗರ್ವಪಟ್ಟು ಹೇಳಿಕೊಂಡಿದ್ದಾರೆ. ನಮ್ಮ ಪಾರ್ಲಿಮೆಂಟಿನಲ್ಲೂ 30 – 40 ಪ್ರತಿಶತ ಜನರು Homosexual ಗಳಿದ್ದಾರೆ ಎಂದು.

ಹುಝೂರ್(ಅಬಿಅ) ಹೇಳಿದರು. ಕೆಲ ಜನರಿಗೆ ಯಾವುದೇ ಮಾನಸಿಕ ಸಮಸ್ಯೆಯಿದ್ದರೆ ಅವರ ಬಗ್ಗೆ ಮತನಾಡುವುದು ಪಾರ್ಲಿಮೆಂಟಿನ ಕೆಲಸವಲ್ಲ. ಅದೇ ರೀತಿ ಸ್ತ್ರೀಯರು ಪರದೆ ಮಾಡಬೇಕು, ಬೇಡ ಎನ್ನುವ ಕುರಿತು ಮಾತನಾಡುವುದು ಪಾರ್ಲಿಮೆಂಟಿನ ಕೆಲಸವಲ್ಲ. ಮಸೀದಿಗಳಿಗೆ ಗೋಪುರವಿರಲಿ ಇಲ್ಲದಿರಲಿ. ಪ್ರತಿ ಸಮುದಾಯ, ಪ್ರತಿ ಧರ್ಮಕ್ಕೆ ತನ್ನದೇ ಆದ ಕೆಲವು ಸಂಸ್ಕೃತಿಗಳಿರುತ್ತವೆ. ಅದರಲ್ಲಿ ಹಸ್ತಕ್ಷೇಪವಾಗಬಾರದು. ಯಾರು Homo-sexuality ನಲ್ಲಿ ತೊಡಗಿದ್ದಾರೆ. ಅವರ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚಿಸಿ ಓಪನ್ ಮಾಡುವ ಅಗತ್ಯವೇನಿದೆ.

ಹುಝೂರ್(ಅಬಿಅ) ಹೇಳಿದರು. ಐರ್ಲ್ಯಾಂಡಿನಲ್ಲಿ ಆದ ರೆಫ್ರಂಡಮ್ ನಲ್ಲಿ ಅಹ್ಮದಿಯರು ಅದರ ವಿರುದ್ಧ ಮತ ಕೊಟ್ಟಿದ್ದಾರೆ. ಐರಿಷ್ ಅಹ್ಮದಿ ಒಬ್ಬ ನಾಗರಿಕನ ನೆಲೆಯಲ್ಲಿ ಅಲ್ಲಿ ವಾಸಿಸುತ್ತಿದ್ದಾರೆ, ತಮ್ಮ ನಡತೆಯಿಂದಲೂ ತಮ್ಮ ವ್ಯವಹಾರದಿಂದಲೂ ಇಂತಹ ಕಾನೂನುಗಳಿಂದ ಬೇಸರ ವ್ಯಕ್ತಪಡಿಸುತ್ತಾರೆ. ನನ್ನ ದೃಷ್ಟಿಯಲ್ಲಿ ಈ ಲಾ ಕಾನೂನು ದೇಶವನ್ನು ಒಡೆದು ಹಾಕುವುದು. ಜನರು ಈ ಕಾನೂನಿನ ಮೂಲಕ ದುಷ್ಪರಿಣಾಮವನ್ನು ಆಹ್ವಾನಿಸುತ್ತಿದ್ದಾರೆ.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 06 August 2020 Issue No. 30

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 29ರ ವರದಿಯ ಉಳಿದ ಭಾಗ)**

**ಪತ್ರಕರ್ತರು ಪ್ರಶ್ನೆ ಮಾಡಿದರು: ಜನರು ಹೇಳುತ್ತಾರೆ, ಲೋಕದಲ್ಲಿ ಎಷ್ಟೊಂದು ಸಂಘಟನೆಗಳಿವೆ. ಪ್ರತಿಯೊಬ್ಬರು ಹೇಳುವುದು ನಾವು ನಿಜವಾದ ಮುಸ್ಲಿಮರಾಗಿದ್ದೇವೆ, ಎಂದು. ಹೀಗಿರುವಾಗ ನಿಜವಾದ ಮುಸ್ಲೀಮರನ್ನು ಗುರುತಿಸಲು ಆ ಮುಸ್ಲೀಮರಿಗೆ ನಿಮ್ಮ ಸಲಹೆಯೇನು?**

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ನಿಸ್ಸಂಶಯವಾಗಿ ಪ್ರತಿಯೊಬ್ಬರು ಹೇಳಿಕೊಳ್ಳಲಿ. ನಾವು ಮುಸ್ಲಿಮರಾಗಿದ್ದೇವೆ ಎಂದು. ನಾನು ಮೊದಲೇ ಹೇಳಿದ್ದೇನೆ. ಯಾರು ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದ್ ರಸೂಲುಲ್ಲಾಹ್ ಎಂದು ಹೇಳುತ್ತಾನೋ ಅವನು ಮುಸಲ್ಮಾನನಾಗಿದ್ದಾನೆ. ಇನ್ನು ಬಾಕಿ ಉಳಿದ ಪ್ರಶ್ನೆ ಎಂದರೆ ನಿಜವಾದ ಮುಸಲ್ಮಾನ ಯಾರು ಮತ್ತು ಯಾರೂ ಅಲ್ಲ ಎಂಬುದು. ಅದಕ್ಕಾಗಿ ನಮಗೆ ಅಲ್ಲಾಹನು ಇಸ್ಲಾಮಿನ ಶಿಕ್ಷಣವನ್ನು ನೀಡಿ ಯಾರನ್ನು ಕಳುಹಿಸಿದ್ದಾನೆಯೋ ಅವನ ಬಳಿಗೆ ಹೋಗಬೇಕಾಗುತ್ತದೆ. ಅದು ಹಝ್ರತ್ ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವವಾಗಿದೆ. ಅವರು ಹೇಳಿದರು; ಯಾವ ರೀತಿ ಯಹೂದಿಯವರಲ್ಲಿ 72 ಪಂಗಡಗಳಾಗಿದ್ದಿತೋ ಅದೇ ರೀತಿ ಇಸ್ಲಾಮಿನಲ್ಲಿ 73 ಪಂಗಡಗಳಾಗುವುವು ಮತ್ತು 73ನೇ ಪಂಗಡವು ನಿಜವಾದ ಖಾಯಮ್ ಜಮಾಅತ್ ಆಗುವುದು.

ಈ ಪಂಗಡಗಳು ಹೇಗೆ ಸೃಷ್ಟಿಗೊಂಡವು? ಮುಖ್ಯವಾಗಿ ಎರಡು ಪಂಗಡಗಳಿವೆ. ಸುನ್ನಿ ಮತ್ತು ಶಿಯಾ. ಈ ಪಂಗಡಗಳಲ್ಲಿಯೂ ವಿಭಾಗಗಳಾಗಿವೆ. ಈ ಸುನ್ನಿಗಳಲ್ಲಿ 34 – 35 ಪಂಗಡಗಳಿವೆ. ಶಿಯಾಗಳಲ್ಲಿಯೂ ಅಷ್ಟೇ ಪಂಗಡಗಳಿವೆ. ಫಿಕ್ (ಧಾರ್ಮಿಕ ತತ್ವ) ಗಳ ಮೇಲೆ ನಡೆಯುವವು ನಾಲ್ಕು ಇವೆ. ಹನಫಿ, ಶಾಫಿ, ಮಾಲಕಿ, ಹಂಬಲಿ. ಆದರೆ ಪಂಗಡಗಳು 72 ಇವೆ. ಪ್ರತಿಯೊಬ್ಬ ಮೌಲ್ವಿ ಒಂದು ಪಂಗಡವನ್ನು ಮಾಡಿಕೊಂಡಿದ್ದಾನೆ. ಈ ಕುರಿತು ನಾನು ಕೆಲವು ವಾರಗಳ ಹಿಂದೆ ಒಂದು ಖುತುಬದಲ್ಲಿಯೂ ಪ್ರಸ್ತಾಪಿಸಿದ್ದೆ. ಹಝ್ರತ್ ಮುಸ್ಲಿಹ್ ಮೌಊದ್(ಅ) ರವರದ್ದು ಕೆಲವು ವಾದಗಳಿವೆ. ಪ್ರತಿಯೊಬ್ಬ ಮೌಲ್ವಿಯು ತನ್ನದು ನಿಜವಾದ ಧರ್ಮವಾಗಿದೆ ಎಂದು ಹೇಳಿಕೊಳ್ಳುತ್ತಾನೆ. ಸಾಮಾನ್ಯ ಮನುಷ್ಯನು ಕೂಡಾ ತನ್ನ ಧರ್ಮ ಇದಾಗಿದೆ ಎಂದು ಹೇಳಿದರೆ ಅದರ ತಾತ್ಪರ್ಯ, ನಾನು ಇಂತಹದನ್ನು ನಂಬುತ್ತೇನೆ. ಇದು ನನ್ನ ಪಂಗಡವಾಗಿದೆ ಎಂದು. ಆದರೆ ಒಬ್ಬ ಧಾರ್ಮಿಕ ನೇತಾರನು "ನನ್ನ ಧರ್ಮ ಇದಾಗಿದೆ" ಎಂದು ಹೇಳುವುದಾದರೆ ಅದರ ಅರ್ಥ ನೀವು ನಮ್ಮಲ್ಲಿಗೆ ಬರಬೇಕು. ಬೇರೆ ಮೌಲ್ವಿಗಳನ್ನು ಬಿಟ್ಟು ಬಿಡಬೇಕು. ಇದು ನನ್ನ ಮಸೀದಿ ಮತ್ತು ಇದು ನನ್ನ ಧರ್ಮವಾಗಿದೆ. ಅದು ನಿಮ್ಮ ಮಸೀದಿ ಮತ್ತು ನಿಮ್ಮ ಧರ್ಮವಾಗಿದೆ. ಮತ್ತೆ ಒಬ್ಬರು ಇನ್ನೊಬ್ಬರನ್ನು ಬೈಯ್ಯುತ್ತಾರೆ ಮತ್ತು ಅವರ ಹಿಂದೆ ನಮಾಝ್ ಮಾಡದಿರಲು ಹೇಳುತ್ತಾರೆ.

ಇವರು ಇನ್ನೊಬ್ಬರಿಗೆ ಕಾಫಿರ್ ಎನ್ನುತ್ತಾರೆ. ಯಾರಿಗೂ ಕಾಫಿರ್ ಹೇಳುವ ಅಧಿಕಾರವಿಲ್ಲ. ಕಲಿಮ ಓದಿದ ಪ್ರತಿಯೊಬ್ಬನೂ ಮುಸ್ಲಿಮನಾಗಿದ್ದಾನೆ. ಆದರೆ ಹಝ್ರತ್ ರಸೂಲುಲ್ಲಾಹ್(ಸ) ರ ಮಾತುಗಳನ್ನು ಯಾರೂ ಒಪ್ಪುವುದಿಲ್ಲ ಮತ್ತು ಅವರ ಭವಿಷ್ಯವಾಣಿಗಳ ಪ್ರಕಾರ ಬರುವ ಮಹದಿ ಮಸೀಹರನ್ನು ನಂಬುವುದಿಲ್ಲ. ಹಾಗೆ ಅವನು ನಿರಾಕರಿಸುವವನಾಗುತ್ತಾನೆ. ಅದರನ್ವಯ ಕುಫ್ರ್ ಎಂಬುದರ ಅರ್ಥ ನಿರಾಕರಿಸುವುದು ಎಂದಾಗಿರುತ್ತದೆ.

ಅಂದರೆ ಯಾರ ಅಸ್ತಿತ್ವವೇ ಇರಲಿ ಅದನ್ನು ನಿರಾಕರಿಸುವುದು ಕುಫ್ರ್ ಎಂದಾಗುತ್ತದೆ.

**ಪತ್ರಕರ್ತರು ಪ್ರಶ್ನೆ ಕೇಳಿದರು: ಅಹ್ಮದಿಯಾ ಜಮಾಅತ್‌ನ್ನು ಒಂದು ಸುಧಾರಕ ಸಂಘಟನೆಯ ರೀತಿಯಲ್ಲಿ ಕಾಣುತ್ತೇವೆ. ಅಹ್ಮದಿಯಾ ಜಮಾಅತ್ತಿನ ಸ್ಥಾಪಕರು ಯಾವ್ಯಾವ ಸುಧಾರಣೆಗಳನ್ನು ತಂದರು?**

ಹುಝೂರ್(ಅಬಿಅ) ಹೇಳಿದರು. ನೀವು ಹೇಳಿರುವ ಪರಿಭಾಷೆ (Defination) ಸುಧಾರಕ ಸಂಘಟನೆ ಎಂದಾಗಿದೆ ಆದರೆ ಇದನ್ನು ಅಲ್ಲಾಹನು ಹೇಳಲಿಲ್ಲ. ಅವನ ಸಂದೇಶವಾಹನೂ ಹೇಳಲಿಲ್ಲ. ಇದು ಕೇವಲ ಸುದಾರಣಾ ಸಂಘಟನೆಯಾಗಿದೆ ಎಂದು. ಅಲ್ಲಾಹನು ಸೂರಃ ಜುಮುಅದಲ್ಲಿ ಹೇಳಿದ್ದಾನೆಃ ಹಝ್ರತ್ ರಸೂಲುಲ್ಲಾಹ್(ಸ) ತಂದಿರುವಂತಹ ಧರ್ಮ, ಆ ಧರ್ಮವನ್ನು ಸ್ಥಾಪಿಸುವವರಲ್ಲಿ ಆಖರೀನ್ ಅಂದರೆ ಕೊನೆಯಲ್ಲಿ ಕೆಲ ಜನರು ಬರುವರು. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದ್ದರು: ವಿಶ್ವಾಸವು (ಈಮಾನ್) ಕೃತಿಕಾ ನಕ್ಷತ್ರಕ್ಕೆ ತಲುಪಿದರೂ ಆ ಜನರಲ್ಲಿ ಕೆಲವರು ಅದನ್ನು ಮರಳಿ ತರುವರು. ಅಂದರೆ ಮಸೀಹ್ ಮೌಊದ್(ಅ) ರನ್ನು ನಂಬುವವರು ಮರಳಿ ತರುವರು. ಈ ರೀತಿ ಧರ್ಮವನ್ನು ಸರಿಯಾದ ರೀತಿಯಲ್ಲಿ ಖಾಯಂಗೊಳಿಸಿದಾಗ ಧರ್ಮದ ಎರಡು ಕಾರ್ಯಗಳು ಮುಖ್ಯವಾಗಿರುತ್ತವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ಆ ಎರಡು ಕೆಲಸಗಳು ಹೀಗಿವೆ: ಮೊದಲನೆಯದಾಗಿ ದಾಸನನ್ನು ಅಲ್ಲಾಹನೊಂದಿಗೆ ಜೋಡಿಸುವುದು ಎರಡನೆಯದಾಗಿ ಮಾನವ ಹಕ್ಕುಗಳನ್ನು ಪಾಲಿಸುವುದು. ಮನುಷ್ಯನು ಅಲ್ಲಾಹನನ್ನು ಪಡೆಯಬೇಕಾದರೆ ಅಲ್ಲಾಹನಿಗೋಸ್ಕರ ಕಾರ್ಯವೆಸಗಲು ಪ್ರಯತ್ನ ಮಾಡಬೇಕಾಗುತ್ತದೆ. ಹಾಗಾಗಿ ಅವನು ದುಷ್ಕರ್ಮವೆಸಗಲು ಸಾಧ್ಯವೇ ಇಲ್ಲ.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ: ಬಡವರ ಬಗ್ಗೆ ಗಮನವಿರಲಿ, ಅನಾಥರ ಬಗ್ಗೆ ಗಮನವಿರಲಿ, ಪ್ರಯಾಣಿಕರ ಮೇಲೆ ಗಮನವಿರಲಿ, ತನ್ನ ನೆರೆಹೊರೆಯವರ ಮೇಲೆ ಗಮನವಿರಲಿ, ತನ್ನ ಪತ್ನಿಯರ ಮೇಲೆ ಗಮನವಿರಲಿ, ತನ್ನ ಮಕ್ಕಳಿಗೆ ತರಬೇತಿ ನೀಡಿರಿ. ಹೀಗೆ ಅಸಂಖ್ಯಾತ ಉಪದೇಶಗಳಿವೆ. ಗಮನಹರಿಸಿರಿ ಎಂಬುದರ ಅರ್ಥ ನಿಮ್ಮನ್ನು ಸುಧಾರಿಸಿಕೊಳ್ಳಿ ಎಂದು. ಇದನ್ನು ನಿಜಾರ್ಥದಲ್ಲಿ ಅಲ್ಲಾಹನೊಡನೆ ಸಂಪರ್ಕ ಸಾಧಿಸದೆ ಪಡೆಯಲು ಸಾಧ್ಯವಿಲ್ಲ. ಮನುಷ್ಯನು ಯಾವುದೇ ಕೆಲಸವನ್ನು ಮಾಡುವುದಾದರೆ – ಉದಾಹರಣೆಗೆ ಈ ದೇಶದಲ್ಲಿ ಹೆಚ್ಚಿನವರು ಕಳ್ಳತನ ಮಾಡುವುದಿಲ್ಲ ಅಥವಾ ಅದರಿಂದ ಹೆದರುತ್ತಾರೆ ಏಕೆಂದರೆ ಅವರಿಗೆ ಪೋಲಿಸರ ಅಥವಾ ಕಾನೂನಿನ ಭಯವಿರುತ್ತದೆ. ಅವರಿಗೆ ಬೇಕಾಬಿಟ್ಟಿ ಅನುಮತಿ ನೀಡಿದರೆ ಮತ್ತು ಯಾವುದೇ ಕಾಯಿದೆ ಕಾನೂನುಗಳ ಆತಂಕವಿಲ್ಲದಿದ್ದರೆ, ಎಲ್ಲರ ನೈತಿಕತೆ ಕೆಳಮಟ್ಟಕ್ಕೆ ಬರುವುದು. ಅಂದರೆ ಅಲ್ಲಾಹನೊಂದಿಗೆ ಸಂಬಂಧವಿದ್ದರೆ ಮತ್ತು ಅಲ್ಲಾಹನಿಗೋಸ್ಕರವೇ ಮನುಷ್ಯನು ಎಲ್ಲವನ್ನೂ ಮಾಡುವುದಾದರೆ ಅದರ ಹಕ್ಕುಗಳನ್ನು ಪಾಲಿಸುವವನಾದರೆ, ಆಗ ಅವನ ನಿರ್ದೇಶನಕ್ಕಿಂತ ಇತರರ ಹಕ್ಕುಗಳನ್ನು ಪಾಲಿಸುವವನಾಗುತ್ತಾನೆ. ಅಂತೂ ಇದು ಸುಧಾರಕ ಸಂಘಟನೆಯಾಗಲು ಕಾರಣವೇನೆಂದರೆ ನಮ್ಮ ಧರ್ಮವು ಒಂದು ಪರಿಪೂರ್ಣ ಮತ್ತು ಪರಿಪಕ್ವ ಧರ್ಮವಾಗಿದೆ. ಅದು ಅಲ್ಲಾಹನೊಂದಿಗೆ ಸಂಬಂಧ ಜೋಡಿಸುತ್ತದೆ ಮತ್ತು ಜನರ ಹಕ್ಕುಗಳನ್ನೂ ಪಾಲಿಸುತ್ತದೆ.

ಹುಝೂರ್ ಹೇಳಿದರು. Law and order ಬಗ್ಗೆ ನನಗೆ ನೆನಪಾಯಿತು. ಪಾಕಿಸ್ತಾನದಿಂದ ಯಾರೋ ಒಬ್ಬರು ನನಗೆ ಒಂದು ಪತ್ರಿಕೆಯ ತುಣುಕನ್ನು ಕಳುಹಿಸಿದ್ದರು. ಅದರಲ್ಲಿ ಒಂದು ಪ್ರತಿಭಟನಾ ಮೆರವಣಿಗೆಯ ವಿವರವಿತ್ತು. ಪ್ರತಿಭಟಿಸುವವರ ಕೈಗಳಲ್ಲಿ ಬಂದೂಕುಗಳಿದ್ದವು. ಕೆಳಗೆ ಶಿರೋನಾಮ ಏನೆಂದರೆ ಇವರು ಘೋಂಗಿ ಕ್ಷೇತ್ರದ ಡಕಾಯತರಾಗಿದ್ದರು. ಪೋಲೀಸರು ತಮ್ಮ ಮೇಲೆ ಹಿಂಸೆ ಎಸಗುತ್ತಾರೆ. ತಮಗೆ ಅಷ್ಟೊಂದು ಆದಾಯವಿಲ್ಲ. ಆದರೆ ಪೋಲೀಸರು ಪ್ರತಿಯೊಬ್ಬರಿಂದ ತಿಂಗಳಿಗೆ ಅಥವಾ ಎರಡು ತಿಂಗಳಿಗೆ ಒಂದೊಂದು ಲಕ್ಷ ರೂಪಾಯಿಗಳನ್ನು ಪಡೆಯುತ್ತಿದ್ದಾರೆ ಎಂದು ಅವರು ಪ್ರತಿಭಟಿಸುತ್ತಿದ್ದರು. ಪೋಲೀಸರ ಎಸ್.ಪಿ ಸಾಹೇಬರು ಅವರನ್ನು ಹಿಡಿದು ಜೈಲಿಗೆ ಹಾಕುವ ಬದಲು ಪ್ರತಿಭಟಿಸುವವರನ್ನು ಸಮಾಧಾನಿಸುತ್ತಾ ಹೇಳುತ್ತಿದ್ದರು – ನೀವು ಜನರನ್ನು ಲೂಟಿ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಪೋಲೀಸರು ತಮ್ಮ ಲೂಟಿ ಮಾಡಿದ ಸಂಪತ್ತಿನಿಂದ ಹೆಚ್ಚಿನ ಪಾಲನ್ನು ಕೇಳುತ್ತಾರೆ ಎಂದು ಆ ಕಳ್ಳರು ಪ್ರತಿಭಟಿಸುತ್ತಿದ್ದರು. ಅದು ಹೆಚ್ಚಿರಲಿ, ಕಡಿಮೆ ಇರಲಿ ಅವರು ಲೂಟಿ

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.